ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೧ ಮೇ, ೨೦೦೧ ಸಂಚಿಕೆ ೧೦

ರೈತರ ಮತ್ತು ನೇಕಾರರ ಆತ್ಮಹತ್ಯ

ದೇಶದ ಭವಿಷ್ಯ ಆತಂಕದಲ್ಲಿ ?

★

ಜಾಗತೀಕರಣ ಯಾರ ಲಾಭಕ್ಕಾಗಿ ?

★

ಲೋಕಸೇವಕ ಜಯಪ್ರಕಾಶ ನಾರಾಯಣ

★

ಜಾಗತೀಕರಣದ ಸವಾಲಿಗೆ ರಾಷ್ಟ್ರೀಯ
ಕಾರ್ಯತಂತ್ರ ಅಗತ್ಯ

★

ಪುನಃ ಗಾಂಧೀ ಪ್ರಣೀತ ಸ್ವದೇಶಿ ಆಂದೋಲನ
ಪ್ರಾರಂಭವಾಗಬೇಕು

★

ವಿಶ್ವವಾಣಿಜ್ಯ ಸಂಸ್ಥೆ, ಉದ್ಯೋಗ ಮತ್ತು ಬಡತನ

★ ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೧ ಸಂಚಿಕೆ : ೧೦

ಮೇ ೨೦೦೧

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

....

ಚಂದಾ ವಿವರ :

ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ : ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :
ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧.
ದೂರವಾಣಿ : ೦೮೨೩೬/೫೮೭೫೪

ಭಿಕ್ಷುಕರು

ಓಟು ಕೇಳುವ ರಾಜಕಾರಣಿ
ಪ್ರೀತಿ ಬಯಸುವ ಪ್ರಿಯತಮ
ಸಾಲ ಕೇಳುವ ಬಡ ರೈತರು
ಕನ್ಯೆಯನ್ನು ಬೇಡುವ ಮದುಮಗ
ಚಿಲ್ಲರೆ ಕೇಳುವ ವ್ಯಾಪಾರಿಗಳು
ಬೆಳಕನ್ನು ಸೂರ್ಯನಿಂದ ಬೇಡುವ ಜೀವಿ,
ಲಂಚ ಕೇಳುವ ಅಧಿಕಾರಿ
ಅಂಕಗಳನ್ನು ಬೇಡುವ ವಿದ್ಯಾರ್ಥಿಗಳು
ಆಹಾರವನ್ನು ಬೇಡುವ ಹೊಟ್ಟೆ,
ಭಿಕ್ಷೆಯನ್ನು ಯಾಚಿಸುವ ಯಾಚಕರು,
ಇವರೆಲ್ಲರೂ ಭಿಕ್ಷುಕರು.

– ಜೆ. ಅಚಿಂತ್ಯ

ಚಂಧಾದಾರರಲ್ಲಿ ವಿನಂತಿ.
ಚಂದಾ ಕಳುಹಿಸಿರುವ ಓದುಗರಿಗೆ
ಕೃತಜ್ಞತೆಗಳು
– ಪ್ರಕಾಶಕರು

ಜನಪದ ಸಂಗತಿ.................

ಇತ್ತೀಚಿನ ವರ್ಷಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಗಳು ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಹಂತಗಳಲ್ಲಿಯೂ ನಡೆದುಕೊಂಡು ಬರುತ್ತಿವೆ. ಇದು ಒಂದು ಆರೋಗ್ಯಕರ ಬೆಳವಣಿಗೆಯೆಂದು ತಿಳಿಯಬಹುದು. ಆದರೆ ಇವುಗಳ ವ್ಯವಸ್ಥಾಪನದ ಹಿಂದೆ ಇರುವ ಕಿತ್ತಾಟ, ಗೊಂದಲ, ಮನಸ್ತಾಪ ಮತ್ತು ಹಣದ ಅವ್ಯವಹಾರ ಇತ್ಯಾದಿಗಳು; ಹಾಗೂ ಇವು ಕೈಗೊಳ್ಳುವ ಕ್ರಿಯಾಹೀನ ಮಾದ ಠರಾವುಗಳು; ಈ ಸಂದರ್ಭಗಳಲ್ಲಿ ದುರುಪಯೋಗಪಡಿಸಿಕೊಳ್ಳಲಾಗುವ ಜಾನಪದ ಕಲಾವಿದರ ಹಾಗೂ ಶಾಲಾ ಮಕ್ಕಳ ಸೇವೆ; ಮತ್ತು ಇಷ್ಟೆಲ್ಲ ಶ್ರಮದ ನಂತರವೂ ಕನ್ನಡದ ಬಗ್ಗೆ ಉದಾಸೀನತೆ, ಕನ್ನಡಿಗರ ಅನಾಥಪ್ರಜ್ಞೆ ಉಳಿದುಕೊಂಡೇ ಬರುವ ಪರಿಸ್ಥಿತಿ ಮತ್ತು ರಾಜ್ಯದ ಭಾಷಾ ನೀತಿಯ ಅಭಾವ ಇತ್ಯಾದಿಗಳು ಮುಂದುವರಿದುಕೊಂಡೇ ಬರುತ್ತಿರುವುದನ್ನು ಗಮನಿಸಿದಾಗ ಈ ಸಮ್ಮೇಳನಗಳು ನಿರರ್ಥಕವೆನಿಸುವ ಅಪಾಯದ ಅಂಚಿಗೆ ಹೋಗುತ್ತಿವೆ. ಈ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಪರ ಹೋರಾಟಗಾರರು ಮತ್ತು ಆಸಕ್ತರು ಗಂಭೀರವಾಗಿ ಆಲೋಚಿಸಬೇಕು. ಕನ್ನಡ ಮತ್ತು ಕನ್ನಡಿಗರ ಹಿತವನ್ನು ಕಾಪಾಡಿಕೊಂಡು ಬರಬಹುದಾದಂಥ ಕಾಲವು ಕಳೆದು ಹೋಗುವ ಮುನ್ನ ರಾಜ್ಯ ಮಟ್ಟದಲ್ಲಿ ಒಂದು ಕ್ರಿಯಾ ಯೋಜನೆಯನ್ನು ತಯಾರಿಸುವ ಪ್ರಕ್ರಿಯೆ ಪ್ರಾರಂಭವಾಗಬೇಕು. ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ವಿಜ್ಞಾನ ಪರಿಷತ್ತು ಇತ್ಯಾದಿ ಸಂಸ್ಥೆಗಳು ಈ ದಿಕ್ಕಿನಲ್ಲಿ ಹೆಜ್ಜೆ ಇಡಬೇಕು.

ಈ ತಿಂಗಳಲ್ಲಿ ದೇಶದ ಐದು ರಾಜ್ಯಗಳಲ್ಲಿ ವಿಧಾನ ಸಭೆಗಳಿಗೆ ಚುನಾವಣೆಗಳು ನಡೆಯಲಿವೆ. ಚುನಾವಣೆಗಳು ಬಂದ ಕೂಡಲೇ ಸಾಮಾಜಿಕ ಉಲ್ಬಣಗಳು ಶುರು ಆಗುತ್ತವೆ. ಅಡಿಯಲ್ಲಿರುವ ಕೊಚ್ಚೆಯು ನೀರಿನ ಕುಲಕಾಟದಿಂದಾಗಿ ಮೇಲೆ ಬರುವಂತೆ ಈ ಚುನಾವಣೆಗಳ ಕಾರಣದಿಂದಾಗಿ ಸ್ಥಳೀಯ ಸಮಾಜದಲ್ಲಿ ಏನೆಲ್ಲ ನೈತಿಕ ಕುಸಿತ ಕಂಡುಬರುತ್ತವೆ. ಯಾವುದೇ ಸಿದ್ಧಾಂತವಿಲ್ಲ, ನಿಷ್ಠೆಯಿಲ್ಲ, ಕಾರ್ಯಕ್ರಮವಿಲ್ಲ; ಎಲ್ಲ ಅಭ್ಯರ್ಥಿಗಳ ತಲೆಯೂ ಖಾಲಿ. ಅಲ್ಲಿ ತುಂಬಿರುವುದೆಲ್ಲ ಅಧಿಕಾರ ದಾಹ ಮತ್ತು ಅದಕ್ಕಾಗಿ ಏನೆಲ್ಲ ಮಾಡುವುದಕ್ಕೂ ಸಿದ್ಧವಾದ ಮನೋಸ್ಥಿತಿ.

ಇಷ್ಟೆಲ್ಲ ಕುರುಕ್ಷೇತ್ರದ ನಂತರ ಪರಿಣಾಮವಾದರೂ ಏನು ? ಸೊನ್ನೆ. ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್ಸಿನ ಮಮತಾ ಬ್ಯಾನರ್ಜಿ, ತಮಿಳು

ನಾಡಿನ ಎಐಡಿಎಮ್‌ಕೆಯ ಜಯಲಲಿತಾ ಹಾಗೂ ಡಿಎಂಕೆಯ ಕರುಣಾನಿಧಿ, ಕೇರಳದ ಕಾಂಗ್ರೆಸ್ಸಿನ ಕರುಣಾಕರನ್ ಮುಂತಾದ ನಾಯಕರು ಈಗಾಗಲೇ ತಮ್ಮ ಸೈದ್ಧಾಂತಿಕ ಹಾಗೂ ನೈತಿಕ ದಿವಾಳಿತನ ತೋರಿಸಿದ್ದಾರೆ; ಬಿಜೆಪಿಯು ಸಿದ್ಧಾಂತದ ಮಾತುಗಳನ್ನು ಆಡುತ್ತ ಆಷಾಢಭೂತತನವನ್ನು ಪ್ರದರ್ಶಿಸುತ್ತಿದೆ. ಇಂಥ ನಾಯಕಗಣದಿಂದ ದೇಶಕ್ಕೆ ನಿಜವಾಗಿಯೂ ಮುಕ್ತಿ ಸಿಕ್ಕೀತೆ? ಕಾರ್ಮೋಡಕ್ಕೊಂದು ಬೆಳ್ಳಿ ಅಂಚು ಇರುವಂತೆ ಕೆಡುತ್ತಿರುವ ಪ್ರಜಾಪ್ರಭುತ್ವ ಪದ್ಧತಿಯ ಸುಧಾರಣೆಗಾಗಿ ಮಧ್ಯಪ್ರದೇಶದಲ್ಲಿ ಒಂದು ಪ್ರಯತ್ನ ನಡೆದಿದೆ. ಅಲ್ಲಿಯ ಪಂಚಾಯತ್ ಕಾನೂನಿನಲ್ಲಿ ಭ್ರಷ್ಟ ಅಥವಾ ಜನರ ವಿಶ್ವಾಸವನ್ನು ಕಳೆದುಕೊಂಡಿರುವ ಪ್ರತಿನಿಧಿಯನ್ನು ಹಿಂದಕ್ಕೆ ಕರೆಸಿಕೊಳ್ಳುವ ಅವಕಾಶವಿದೆ. ಈಗಾಗಲೇ ಈ ಅವಕಾಶವನ್ನು ಉಪಯೋಗಿಸಿಕೊಂಡ ಒಂದು ಕ್ಷೇತ್ರದಲ್ಲಿ ಇದರ ಪ್ರಯೋಗ ನಡೆದಿದೆ. ಪರಿಣಾಮವನ್ನು ಇನ್ನೂ ತಿಳಿಯಬೇಕಿದೆ. ಆದರೆ ಇದೊಂದು ಪರಿಣಾಮಕಾರಿ ಕ್ರಮ ಎಂದು ಭಾವಿಸಬಹುದಾಗಿದೆ.

ಬಾಂಗ್ಲಾದೇಶದ ಗಡಿಭದ್ರತಾ ಸೈನಿಕರಿಂದ ಭಾರತೀಯ ಗಡಿಭದ್ರತಾ ಸೈನಿಕರ ಹತ್ಯೆ ಹೃದಯವಿದ್ರಾವಕವಾಗಿದೆ. ಶಾಂತಿಯಿಂದ ಇದ್ದ ಗಡಿಯಲ್ಲಿ ಇದ್ದಕ್ಕಿದ್ದ ಹಾಗೆ ಅಶಾಂತಿಯನ್ನು ಉಂಟುಮಾಡಿದ ಬಾಂಗ್ಲಾ ರೈಫಲ್ಸ್‌ವರ ಈ ಅಮಾನುಷೀಯ ಕೃತ್ಯಕ್ಕೆ ಏನು ಕಾರಣ? ಬಾಂಗ್ಲಾದೇಶದಲ್ಲಿ ಇಷ್ಟರಲ್ಲಿಯೇ ಸಾರ್ವಜನಿಕ ಚುನಾವಣೆ ನಡೆಯಲಿದೆ. ಭಾರತದ ಬಗ್ಗೆ ಸ್ನೇಹಭಾವನೆ ತಾಳಿರುವ ಯಾವುದೇ ರಾಜಕೀಯ ಪಕ್ಷಕ್ಕೆ ಅಲ್ಲಿ ಭವಿಷ್ಯವಿಲ್ಲವೆಂಬ ಧರ್ಮಾಂಧ ಕೋಮು ಭಾವನೆ ತೀವ್ರವಾಗಿ ಬೆಳೆದಿದೆ. ಆದ್ದರಿಂದ ಈಗ ಅಲ್ಲಿಯ ಪ್ರಧಾನ ಮಂತ್ರಿ ಶೇಕ್ ಹಸೀನಾ ಅವರು ಭಾರತದ ಬಗ್ಗೆ ಕೊಂಚ ಸಹಾನುಭೂತಿಯುಳ್ಳವರಾಗಿರುವುದರಿಂದ ಅವರ ಪುನರಾಯ್ಕೆ ಎಲ್ಲಿ ಅಸಂಭವವಾಗುವುದೋ ಎಂಬ ಭೀತಿಯಿಂದ ತಮ್ಮ ಪರ ಚುನಾವಣಾ ಗಾಳಿ ಬೀಸುವಂತೆ ಮಾಡಲು ಸೃಷ್ಟಿಸಿದ ಘಟನೆ ಇದು ಎಂದು ಹೇಳಲಾಗುತ್ತಿದೆ. ಅದು ಏನೇ ಇರಲಿ. ಈ ದುರ್ಘಟನೆಯ ಬಗ್ಗೆ ಭಾರತದ ನಿಲುವೇನು? ಹಿಂದಿನ ಕಾಲದಲ್ಲಿ ಇಂಥ ಘಟನೆ ನಡೆದಿದ್ದರೆ ಎರಡು ರಾಷ್ಟ್ರಗಳ ಮಧ್ಯ ಯುದ್ಧವೇ ನಡೆದುಹೋಗುತ್ತಿತ್ತು. ಅಥವಾ ಈಗಲೂ ಸಹ ಯುರೋಪ್‌ನಲ್ಲಾಗಲೀ ಅಥವಾ ಅಮೇರಿಕಾ ದೇಶಕ್ಕೆ ಸಂಬಂಧಿಸಿದಂತಾಗಲೀ ಇಂಥ ಘಟನೆ ನಡೆದಿದ್ದರೆ ಅಲ್ಲಿ ಯುದ್ಧವೇ ಪ್ರಾರಂಭವಾಗುತ್ತಿತ್ತು. ಯಾವುದೇ ಸ್ವಾಭಿಮಾನಿ ದೇಶ ಇಂಥ ಬರ್ಬರ ಕೃತ್ಯವನ್ನು ಸಹಿಸಲು ಸಾಧ್ಯವಿಲ್ಲ. ಆದರೆ ನಮ್ಮ ದೇಶ ಯಾವುದೇ ಕಠೋರ

ರೈತರ ಮತ್ತು ನೇಕಾರರ ಆತ್ಮಹತ್ಯೆ, ದೇಶದ ಭವಿಷ್ಯ ಆತಂಕದಲ್ಲಿ ?

– ಸುರೇಂದ್ರ ಕೌಲ

ಯಾವ ದೇಶದಲ್ಲಿ ಅನ್ನ ಬೆಳೆಯುವ ರೈತರು ಹಾಗೂ ಬಟ್ಟೆ ಕೊಡುವ ನೇಕಾರರು ಹಣಕಾಸಿನ ದುಃಸ್ಥಿತಿಯ ಕಾರಣದಿಂದ ಆತ್ಮಹತ್ಯೆ ಮಾಡಿಕೊಳ್ಳ ಬೇಕಾಗುತ್ತದೋ ಅಂಥ ದೇಶಕ್ಕೆ ಒಳ್ಳೆಯ ಭವಿಷ್ಯವಿರುವುದಿಲ್ಲ ಇದು ಸೂರ್ಯಪ್ರಕಾಶದಷ್ಟೇ ಸತ್ಯ. ಪ್ರತಿಯೊಬ್ಬ ಮನುಷ್ಯನಿಗೂ ಅತಿಮುಖ್ಯ ವಾಗಿ ಅನ್ನ ಮತ್ತು ಬಟ್ಟೆ ಬೇಕು. ಅವನ ಆರ್ಥಿಕ ಸ್ಥಿತಿ ಉತ್ತಮಗೊಂಡಂ ತೆಲ್ಲ ಅವನ ಊಟ ಮತ್ತು ಬಟ್ಟೆಯ ಅಭಿರುಚಿಗಳಲ್ಲಿ ನಾವಿನ್ಯತೆ ಕಂಡುಬರ ಬಹುದು. ಆದರೆ ಮೂಲಭೂತವಾಗಿ ಗಂಜಿ ರೂಪದಲ್ಲಿ ಅನ್ನ, ಕೌಪೀಣ ರೂಪದಲ್ಲಿ ಬಟ್ಟೆ ಬೇಕೆ ಬೇಕು. ಹೀಗೆ ಜೀವನದ ಈ ಎರಡು ಅನಿವಾರ್ಯ ವಸ್ತುಗಳ ಉತ್ಪಾದಕರು ಯಾವುದೇ ಸಮಾಜದ ಆಧಾರ ಸ್ಥಂಭಗಳ ಆಗಿದ್ದಾರೆ. ಹೇಗೆ ಸ್ತಂಭಗಳು ಅಲುಗಾಡಿದರೆ ಅದರ ಮೇಲ್ಛಾವಣಿ ಕೆಳಗೆ ಬೀಳುತ್ತದೋ ಅದೇ ರೀತಿ ರೈತ ಮತ್ತು ನೇಕಾರರು ತಮ್ಮ ಆರ್ಥಿಕ ತೊಂದರೆಗಳಿಂದಾಗಿ ಆತ್ಮಹತ್ಯ ಮಾಡಿಕೊಳ್ಳಲು ಪ್ರಾರಂಭಿಸಿದರೆ ಆ ದೇಶದ ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಗೆ ಆಪತ್ತು ಕಾದಿದೆ ಎಂಬ ಶಕುನ ಸುಳ್ಳಾಗಲಾರದು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿವರ್ಷ ಕೈಗಾರಿಕಾ ನೀತಿ ಗಳನ್ನು ಘೋಷಣೆ ಮಾಡುತ್ತಲೇ ಇರುತ್ತವೆ. ಆದರೆ ಈ ನೀತಿ ನಿರ್ಧಾರದ ಸಮಯದಲ್ಲಿ ಆ ಸರ್ಕಾರಗಳು ಕೃಷಿ, ಕೈಮಗ್ಗ ಹಾಗೂ ಖಾದಿ ಉದ್ಯಮ ಗಳನ್ನು ಬಹು ಸುಲಭವಾಗಿ ಮರೆಯುತ್ತವೆ ಇಲ್ಲವೆ ಅವುಗಳ ಬಗ್ಗೆ ಮಲ ತಾಯಿ ಧೋರಣೆಯನ್ನು ಅನುಸರಿಸುತ್ತವೆ. ವಿದೇಶಗಳಿಂದ ಬರುವ ಕಂಪನಿಗಳಿಗೆ ಎಲ್ಲಿಲ್ಲದ ಪ್ರೋತ್ಸಾಹವನ್ನು ಕೊಡುವ ಸರ್ಕಾರ ದೇಶಿಯ ಉದ್ಯೋಗಗಳಿಗೆ ಪೈಪೋಟಿಯ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕೆಂಬ ಉಪದೇಶ ನೀಡುತ್ತದೆ. ಇಂಥ ಕೈಗಾರಿಕಾ ನೀತಿ ಪ್ರಜಾಪ್ರಭುತ್ವದ ನೀತಿಗೆ ವಿರುದ್ಧವಾಗಿದೆ.

ಕೃಷಿ ಮತ್ತು ವಸನ ಇವೆರಡೂ ದೇಶದ ಒಟ್ಟಾರೆ ಕೈಗಾರಿಕೆಗಳ ಸಂಕೇ ತವೂ ಆಗಿವೆ. ಬೇರೆ ಯಾವುದೇ ಕೈಗಾರಿಕೆ ಉದಾಹರಣೆಗೆ ವಾಹನಗಳ ತಯಾ ರಿಕೆ, ಕಂಪ್ಯೂಟರ್, ಉಕ್ಕು-ಕಬ್ಬಿಣ ಇಂಥ ಯಾವುದೇ ಕೈಗಾರಿಕೆ ಒಂದು ವೇಳೆ ಇಲ್ಲದಿದ್ದರೂ ಸಮಾಜ ನಡೆದೀತು. ಆದರೆ ಕೃಷಿ ಮತ್ತು ವಸನಕ್ಕೆ

ಸಂಬಂಧಿಸಿದ ಉದ್ಯೋಗಗಳು ನಡೆಯದಿದ್ದರೆ ಸಮಾಜದ ಉಸಿರೇಕಟ್ಟೀತು.

ಇಂಥ ಅತ್ಯಂತ ಮಹತ್ವದ ಮತ್ತು ಮೂಲಭೂತ ಉದ್ಯೋಗಗಳನ್ನು ನಮ್ಮ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಡೆಗಣಿಸಿರುವುದು ದೇಶದ ಕೇಡಿಗೆ ಎಂದು ಅನ್ನೋಣವೆ? ಈಗಾಗಲೇ ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ನೂರಾರು ನೇಕಾರರು ಧೃತಿಗೆಟ್ಟು ಆತ್ಮಹತ್ಯ ಮಾಡಿಕೊಂಡಿದ್ದಾರೆ, ದೇಶದಾದ್ಯಂತ ರೈತರೂ ಸಹ ಆತ್ಮಹತ್ಯ ಮಾಡಿಕೊಂಡಿದ್ದಾರೆ. ಇನ್ನೂ ಈ ದುಃಸ್ಥಿತಿ ಮುಂದುವರಿದಿದೆ. ಆದರೆ ಸರ್ಕಾರಗಳು ಈ ಘಟನೆಗಳನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ. ಜಾಗತೀಕರಣ ಮತ್ತು ಮುಕ್ತ ಮಾರುಕಟ್ಟೆಯ ನೀತಿಯ ಪ್ರಖರ ಬೆಳಕಿಗೆ ನಮ್ಮ ಸರ್ಕಾರದ ಕಣ್ಣುಗಳು ಕುರುಡಾಗಿವೆ. ಬುದ್ಧಿ ವಿಚಲಿತವಾಗಿದೆ. ಆ ಆತ್ಮಹತ್ಯೆಗಳಿಗೆ ಆಯಾ ವ್ಯಕ್ತಿಗಳನ್ನೇ ದೋಷಿಗಳನ್ನಾಗಿ ಮಾಡಲಾಗುತ್ತಿದೆಯೇ ಹೊರ್ತಾಗಿ ತನ್ನ ಕೈಗಾರಿಕಾ ನೀತಿ, ಜವುಳಿ ನೀತಿಗಳಲ್ಲಿ ಇರುವ ಮೂಲಭೂತ ದೋಷಗಳನ್ನು ತಿಳಿದುಕೊಳ್ಳಲು ಸರ್ಕಾರಗಳು ಪ್ರಯತ್ನ ಮಾಡುತ್ತಿಲ್ಲ. ಇಂಥ ಬಿಕ್ಕಟ್ಟಿನ ಸಮಯದಲ್ಲಿ ರೈತರು ಮತ್ತು ನೇಕಾರರು ಸಂಯುಕ್ತ ಸಂಘಟನೆಯನ್ನು ಮಾಡಿಕೊಂಡು ಬಲವಾದ ಅಹಿಂಸಾತ್ಮಕ ಹೋರಾಟ ನಡೆಸಬೇಕು. ಈ ಎರಡು ವರ್ಗಗಳ ನೋವಿನ ರೊಚ್ಚನ್ನು ಯಾರೂ ತಡೆಯಲಾರರು. ಆಗ ದಾರಿ ಸುಗಮವಾದೀತು!

★

ಜನಪದ ಸಂಗತಿ.....................

ಕ್ರಮವನ್ನು ಕೈಗೊಳ್ಳಲು ಹಿಂಜರಿಯುತ್ತಿದೆ. ಕೇವಲ ರಾಜತಾಂತ್ರಿಕ ಕ್ರಮಗಳ ಮೂಲಕ ಈ ಘಟನೆಯ ಮೇಲೆ ತೆರೆ ಎಳೆಯುವ ಪ್ರಯತ್ನ ಮಾಡುತ್ತಿದೆ. ಇದಕ್ಕೆ ನಮ್ಮ ಇಂದಿನ ಸರ್ಕಾರದ ಕೆಲ ಇತಿಮಿತಿಗಳು ಕಾರಣವಿರಬಹುದು. ಆದರೆ ನಮ್ಮ ಭಾರತೀಯ ಜನತೆಯ ಪ್ರತಿಕ್ರಿಯೆಯೇನು? ಇಂಥ ಸಂದರ್ಭಗಳಲ್ಲಿ ಭಾರತ ದೇಶ ಒಂದಾಗಿ ಎದ್ದು ನಿಂತು ಪ್ರತಿಭಟಿಸಬೇಡವೆ? ತನ್ನತನವನ್ನು ಕಾಣಲು ಪ್ರಯತ್ನಿಸಬೇಡವೆ? ಇಂಥ ಸಂದರ್ಭದಲ್ಲಿಯೇ ಯೋಗ್ಯ ನಾಯಕತ್ವದ ಅಗತ್ಯವಿರುತ್ತದೆ. ★

–ಸು. ಕಾ.

ಜಾಗತೀಕರಣ ಯಾರ ಲಾಭಕ್ಕಾಗಿ ?

– ಧೀರುಭಾಯಿ ಎಸ್. ಮೆಹತಾ

(ಶ್ರೀ ಮೆಹತಾ ಮುಂಬೈಯಲ್ಲಿರುವ ಭಾರತೀಯ ವಿದ್ಯಾಭವನದ ಜಂಟಿ ನಿರ್ದೇಶಕರೂ ಮತ್ತು ಚಾರ್ಟಡ್ ಅಕೌಂಟೆಂಟರೂ ಮತ್ತು ಅರ್ಥಶಾಸ್ತ್ರಜ್ಞರೂ ಆಗಿದ್ದಾರೆ. ಜಾಗತೀಕರಣದ ಬಗ್ಗೆ ಉಂಟಾಗಿರುವ ಹುಚ್ಚು ಭ್ರಮೆಯನ್ನು ಇಲ್ಲಿ ನಿರಸನಗೊಳಿಸಿದ್ದಾರೆ - ಸಂ)

ನಾವು ಹುಚ್ಚೆದ್ದು ಬೆನ್ನಹತ್ತಿರುವ ಜಾಗತೀಕರಣದ ಮಾದರಿಯಾದರೂ ಯಾವುದು ? ಅದರ ಮುಖವಾಡವನ್ನು ನೀವು ತೆಗೆದು ಹಾಕಿದರೆ ಸುಂದರವಲ್ಲದ ಅಥವಾ ಮೋಹಕವಲ್ಲದ ಮುಖವನ್ನು ಕಾಣುವಿರಿ. ಶ್ರೀಮಂತರೂ, ಬಲಾಢ್ಯರೂ ಆದಂಥವರು ತಮಗೆ ಬೇಕೆನಿಸಿದುದನ್ನು ಸುಲಭವಾಗಿ ಸಾಗಿಸಿಕೊಂಡು ಹೋಗಬಹುದಾದಂಥ ಒಂದು ದುಷ್ಟ ಷಡ್ಯಂತ್ರವನ್ನು ಕಾಣುವಿರಿ. ಅಲ್ಲಲ್ಲಿ ಏನಾದರೂ ಕೊಂಚ ಮೋಹಕ ಅಥವಾ ಸುಂದರವಾದುದು ಇದ್ದರೆ, ನಾನು ನಿಮಗೆ ನಿಜವಾಗಿಯೂ ಹೇಳುತ್ತೇನೆ, ಅದು ನಿಮಗೂ, ನನಗೂ ಖುಷಿ ಕೊಡುವಂಥದಲ್ಲ. ಅದೆಲ್ಲವೂ ಏಳು ಬಲಾಢ್ಯ ರಾಷ್ಟ್ರಗಳ, ಎಂಟು ಬಲಾಢ್ಯ ರಾಷ್ಟ್ರಗಳ ಅಥವಾ ಇಂಥದೇ ಯಾವುದೋ ಒಂದು ಉನ್ನತ ದರ್ಜೆಯ ಯಜಮಾನರುಗಳು ಮಜಾ ಮಾಡುವುದಕ್ಕೆ ಇರುವಂಥದು. ಒಂದು ಹಳ್ಳಿಯಲ್ಲಿ ಅಲ್ಲಿರುವ ಒಳ್ಳೆಯದೆಲ್ಲವನ್ನೂ ಒಬ್ಬನೇ ಪಾಳೇಗಾರ ಅನುಭವಿಸುವಂಥ ರೀತಿ ಇದಾಗಿದೆ. ಇಂಥ ಪರಿಸ್ಥಿತಿಯಲ್ಲಿ ಇನ್ನೂ ಯಾವ ಬದಲಾವಣೆಯೂ ಆಗಿಲ್ಲ. ಈಗ ಇದು ಜಾಗತಿಕ ಮಟ್ಟದಲ್ಲಿ ಜಾರಿಗೆ ಬರುತ್ತಿದೆಯಷ್ಟೆ. ಜಾಗತೀಕರಣದಿಂದ ಎಲ್ಲ ಆರ್ಥಿಕ ಸಮಸ್ಯೆಗಳು ಪರಿಹಾರಗೊಳ್ಳುವವೆಂಬ ಮಾತನ್ನು ಏಕೆ ಪ್ರಚಾರ ಮಾಡಲಾಗುತ್ತಿದೆ ಎಂಬ ಪ್ರಶ್ನೆಯನ್ನು ಕೇಳಬಯಸುತ್ತೇನೆ. ಹೆಚ್ಚು ವಿಚಾರ ತಿಳಿದಂಥವರ ಕೆಲವು ಹೇಳಿಕೆಗಳನ್ನು ಗಮನಿಸೋಣ. ಅಮೇರಿಕೆಯ ಅಂದಿನ ಅರ್ಥಶಾಖೆಯ ಕಾರ್ಯದರ್ಶಿ ಲೌರೆನ್ಸ್ ಸಮರ್ಸ್ ಅಲ್ಲಿಯ ಬ್ಯಾಂಕರ್ಸ್ ಅಸೋಶಿಯೇಶನನ್ನು ಉದ್ದೇಶಿಸಿ ಮಾಡಿದ ಭಾಷಣದ ಭಾಗ ಈ ರೀತಿ ಇದೆ, "ವಿಶ್ವಬ್ಯಾಂಕ್ ಮತ್ತು ಇತರೆ ಏಜೆನ್ಸಿಗಳ ಮೂಲಕ ಭಾರತ ೧೯೯೧ ರಿಂದ ಎರಡು ಬಿಲಿಯನ್ನು ಡಾಲರ್‌ಕ್ಕೂ ಮಿಕ್ಕಿ ಅಮೇರಿಕೆಯ ಸಹಾಯವನ್ನು ಪಡೆದಿದೆ. ಅದರ ಪರಿಣಾಮವಾಗಿ ಅದರ ಆರ್ಥಿಕ ನೀತಿಯಲ್ಲಿ ಕ್ರಾಂತಿಕಾರಕ ಬದಲಾವಣೆ ಉಂಟಾಗಿದೆ. ಆಮದು ಮತ್ತು ಕಸ್ಟಮ್ಸ ಸುಂಕ ಶೇ ೮೭ ರಿಂದ ೨೭ಕ್ಕೆ ಇಳಿದಿದೆ. ನಾವು ಕೊಟ್ಟ ಬೆಂಬಲದಿಂದಾಗಿ ೭೫ ದೇಶಗಳು ವಿಶ್ವಬ್ಯಾಂಕಿನಿಂದ ೩೫ ಬಿಲಿಯನ್ ಡಾಲರ್‌ಗಳನ್ನು ಪಡೆಯಲು ಸಾಧ್ಯವಾಗಿದೆ.

ಈ ಸಾಲವನ್ನು ಪಡೆಯಬೇಕಾದರೆ ಮುಕ್ತ ಮಾರುಕಟ್ಟೆ, ಜಾಗತೀಕರಣ ಮತ್ತು ಮುಕ್ತ ವಾಣಿಜ್ಯದ ಕರಾರುಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇದರ ಪರಿಣಾಮವಾಗಿ ಅಮೇರಿಕ ತನ್ನ ರಫ್ತನ್ನು ಸಂಚಿತ ಪ್ರಮಾಣದಲ್ಲಿ ಶೇ. ೧೨/- ರಷ್ಟು ಪ್ರತಿ ವರ್ಷ ಹೆಚ್ಚಿಸಿಕೊಂಡಿದೆ. ತನ್ಮೂಲಕ ೮೫೦,೦೦೦ ಜನರಿಗೆ ಉದ್ಯೋಗ ದೊರಕಿಸಿಕೊಟ್ಟಿದೆ. ಆ ದೇಶಗಳೆಲ್ಲವೂ ಮುಕ್ತ ಮಾರುಕಟ್ಟೆಯ ನೀತಿಯನ್ನು ಅಂಗೀಕರಿಸದೇ ಹೋಗಿದ್ದರೆ ನಾವು ನಮ್ಮ ದೇಶದಲ್ಲಿ ಇಷ್ಟು ದೊಡ್ಡ ಪ್ರಮಾಣದ ಉದ್ಯೋಗಗಳನ್ನು ಸೃಷ್ಟಿಸಲು ಸಾಧ್ಯವಾಗುತ್ತಿರಲಿಲ್ಲ."

ಕಳೆದ ವರ್ಷ ಅಮೇರಿಕದ ಮಾಜಿ ವಿದೇಶಾಂಗ ಸಚಿವ ಹೆನ್ರಿ ಕಿಸಿಂಜರ್ ತಮ್ಮ ಬಹಳ ಅಪರೂಪದ ಖಡಾಖಂಡಿತ ಭಾಷಣದಲ್ಲಿ ಹೀಗೆ ಹೇಳಿದರು, "ಇಂದು ನೀವು ಯಾವುದನ್ನು ಜಾಗತೀಕರಣ ಎಂದು ಕರೆಯುತ್ತೀರೋ ಅದು ನಿಜ ಹೇಳಬೇಕಾದರೆ ಅಮೇರಿಕೆಯ ಯಜಮಾನಿಕೆಯೇ ಆಗಿದೆ. ಕಳೆದ ಒಂದು ದಶಕದಲ್ಲಿ ಅಮೇರಿಕ ಬಹಳಷ್ಟು ಪ್ರಗತಿ ಸಾಧಿಸಿತು. ಈಗಿರುವ ಒಂದೇ ಪ್ರಶ್ನೆ ಏನೆಂದರೆ ಅಮೇರಿಕನ್ ಮಾದರಿಯನ್ನು ಬೇರೆಡೆಗೆ ವರ್ಗಾಯಿಸಲು ಸಾಧ್ಯವಾಯಿತೇಯೆಂಬುದು. ಈಗ ಈ ಪ್ರಶ್ನೆಗೆ ಉತ್ತರ ಸಿಕ್ಕಿದೆ. ಜಾಗತೀಕರಣದ ಕಾರಣದಿಂದ ಅಮೇರಿಕ ತನ್ನ ದೇಶದ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದರ ಜೊತೆಗೆ ಆರ್ಥಿಕ ಉನ್ನತಿಯನ್ನೂ ಸಾಧಿಸಿಕೊಂಡಿದೆ". ಅಮೇರಿಕ ಒಂದು ಕಹಿಪಾಠವನ್ನು ಕಲಿತಿದೆ, ಭಗ್ನಗೊಂಡಿರುವ, ದುರ್ಬಲವಾದ ವಿಯೆಟ್ನಾಂನಂಥ ಚಿಕ್ಕ ದೇಶವನ್ನೂ ಶಸ್ತ್ರಾಸ್ತ್ರಗಳ ಬಲದಿಂದ ಗೆಲ್ಲಲು ಸಾಧ್ಯವಿಲ್ಲವೆಂಬ ಪಾಠವನ್ನು ಅರಿತಿದೆ. ಆದ್ದರಿಂದ ದೇಶಗಳನ್ನು ವಸಾಹತುಗಳನ್ನಾಗಿ ಉಂಟುಮಾಡುವ ಪರಿಣಾಮವನ್ನು ಎದುರಿಸದೆ ಯಜಮಾನಿಕೆಯನ್ನು ಸಾಧಿಸುವ ಪರ್ಯಾಯ ಕ್ರಮವೇನೆಂದರೆ ಆರ್ಥಿಕವಾಗಿ ಎಲ್ಲೆಲೂ ಮೇಲುಗೈಯನ್ನು ಸಾಧಿಸುವುದೇ ಆಗಿದೆ.

ನ್ಯೂ ಯಾರ್ಕ್ ಟೈಮ್ಸ್ ಪತ್ರಿಕೆಯ ೧೯೯೯ ಮಾರ್ಚ್ ೨೮ರ ಸಂಚಿಕೆಯಲ್ಲಿ ಅಮೇರಿಕ ಸರ್ಕಾರದ ಸಲಹಾಗಾರರಾಗಿದ್ದ ಥಾಮಸ್ ಫ್ರಿಡ್‌ಮನ್ ಈ ರೀತಿ ಬರೆದಿದ್ದಾರೆ, "ಜಾಗತೀಕರಣದಿಂದ ನಾವು ಸಾಧಿಸ ಬಯಸುವುದೇನು? ಅಮೇರಿಕ ಬಲಾಢ್ಯವೂ, ಎಲ್ಲೆಲ್ಲೂ ವ್ಯಾಪಿಸಿರುವಂಥದೂ ಆಗಿರುವಾಗ ಸಂಕೋಚಪಡುವ ಕಾರಣವಿಲ್ಲ. ಮುಕ್ತ ಮಾರುಕಟ್ಟೆಯ ಅಗಚೋರ ಕೈವಾಡವನ್ನು ನಾವು ನಮ್ಮ ಅಗೋಚರ ಮುಷ್ಟಿಯನ್ನು ಎತ್ತದೆ ಸಫಲವಾಗಿಸಲು ಸಾಧ್ಯವಿಲ್ಲ. ಮೆಕ್ ಡೊನಾಲ್ಡ್ ಡಾಗ್ಲಾಸ್‌ನ ಸಹಾಯವಿಲ್ಲದೆ ಮೆಕಡೊನೆಲ್ ಜಯಿಸಲು ಸಾಧ್ಯವಿರಲಿಲ್ಲ; ಸಿಲಿಕಾನ್ ವ್ಯಾಲಿಯಲ್ಲಿ ಅಭಿವೃದ್ಧಿ ಪಡಿಸಲಾದ

ತಂತ್ರಜ್ಞಾನವೇ ನಮ್ಮ ಅಗೋಚರವಾದ ಮುಷ್ಠಿಯಾಗಿದೆ. ಮುಕ್ತ ವಾಣಿಜ್ಯ ಮತ್ತು ಜಾಗತೀಕರಣದ ನಮ್ಮ ವಿಚಾರಗಳನ್ನು ಅಮೇರಿಕೆಯ ಭೂಸೇನೆ, ವಾಯು ಸೇನೆ ಮತ್ತು ನೌಕಾಸೇನೆಗಳು ಈ ಅಗೋಚರ ಮುಷ್ಠಿಯನ್ನು ಎತ್ತದಿದ್ದರೆ ಸಫಲಗೊಳ್ಳಲು ಸಾಧ್ಯವಿಲ್ಲ." ಈ ಮಾತುಗಳು ಜಾಗತೀಕರಣ ಮತ್ತು ಮುಕ್ತ ವಾಣಿಜ್ಯದ ಹಿಂದಿರುವ ಗುಪ್ತ ಕಾರ್ಯೋದ್ದೇಶ್ಯಗಳನ್ನು ಬಹಿರಂಗಗೊಳಿಸುತ್ತವೆ. ಇಂಗ್ಲೆಂಡಿನ್ ದಿ ಗಾರ್ಡಿಯನ್ ಪತ್ರಿಕೆಯ ಸಂಪಾದಕರಾದ ಲೌರೆನ್ಸ್ ಸಮರ್ಸ್ ಹೀಗೆ ಹೇಳಿದ್ದಾರೆ, "ತಮ್ಮ ದೇಶದೊಳಗಿನ ನಿರುದ್ಯೋಗ ಸಮಸ್ಯೆಯ ಬಗ್ಗೆ ಅಮೇರಿಕನ್ನರು ಬಹಳ ಚಿಂತಿತರಾಗಿದ್ದಾರೆ. ಆದ್ದರಿಂದ ವಿದೇಶಿ ನೆರವು, ಜಾಗತೀಕರಣ, ಮುಕ್ತ ವಾಣಿಜ್ಯದಂಥ ಕಾಲ್ಪನಿಕ ಆಕರ್ಷಣೆಯನ್ನು ಪ್ರಚುರಗೊಳಿಸುವುದು ಅಮೇರಿಕೆಗೆ ಅಗತ್ಯವಾಗಿದೆ ಮತ್ತು ತಮ್ಮ ಪದಾರ್ಥಗಳಿಗೆ ವಿಶ್ವದಾದ್ಯಂತ ಮಾರುಕಟ್ಟೆಯನ್ನು ದೊರೆಕಿಸಿಕೊಳ್ಳುವುದು ಅವರ ಸ್ವಂತ ಬದುಕಿಗೆ ಅನಿವಾರ್ಯವಾಗಿದೆ." ಹಾಗಿದ್ದ ಮೇಲೆ ವಿಶ್ವಬ್ಯಾಕ್ ಆಗಲೀ, ಅಂತರಾಷ್ಟ್ರೀಯ ವಿತ್ತನಿಧಿಯಾಗಲೀ ಜಾಗತೀಕರಣದ ವಿಚಾರವನ್ನು ಏಕೆ ಪ್ರಚಾರ ಮಾಡುತ್ತವೆ? ಅವು ತಮ್ಮ ಯಜಮಾನನಾದ ಅಮೇರಿಕದ ಇಚ್ಛೆಯಂತೆ ಕುಣಿಯುತ್ತಿವೆ. ಎಲ್ಲ ಕಾಯಿಲೆಗಳಿಗೂ ಒಂದೇ ಬಗೆಯ ಔಷಧಿಯನ್ನು ಕೊಡುವ ಹಳ್ಳಿಯ ವೈದ್ಯನಂತೆ ಅಂತಾರಾಷ್ಟ್ರೀಯ ವಿತ್ತನಿಧಿ ಇದೆ ಎಂಬುದಾಗಿ ಆಫ್ರಿಕಾ ಖಂಡದ ಒಂದು ದೇಶದ ಮುಖ್ಯಸ್ಥ ಹೇಳಿದ್ದಾನೆ.

ಜಾಗತೀಕರಣ ಕುರಿತು ಇರುವ ರೋಚಕ ಮಾತುಗಳು ಈಗ ನಿಲುಗಡೆಗೆ ಬಂದಿವೆ. ೧೯೯೦ರ ಪ್ರಾರಂಭದಲ್ಲಿ ಚಿತ್ರಿಸಲಾಗಿದ್ದ ಸುಂದರ ಚಿತ್ರವು ಸುಳ್ಳೆಂದು ಸಾಬೀತಾಗಿದೆ. V CTAD ಯ ಮಹಾಕಾರ್ಯದರ್ಶಿ ರುಬೆನ್ಸ್ ರಿಕುಪೆರೊ ಅವರ ಹೇಳಿಕೆಯಲ್ಲಿ ಈ ಸಂಗತಿ ಪ್ರತಿಬಿಂಬಿತವಾಗಿದೆ, "ಇಂದು ನಾವು ಜಾಗತಿಕರಣವೆಂಬ ಮಹಾಪ್ರವಾಹದ ಮಧ್ಯದಲ್ಲಿದ್ದೇವೆ. ಆದರೆ ನಾವು ಯಾವುದೇ ಗುರಿ, ಕಾರಣ, ತರ್ಕವಿಲ್ಲದೆ ಆ ನೆರೆಯಲ್ಲಿ ಮುಳುಗಬೇಕೆಂದೇನೂ ಇಲ್ಲ. ಜಾಗತೀಕರಣ ಕೆಲವು ಎಚ್ಚರಿಕೆಯನ್ನು ಕೊಟ್ಟಿದೆ. ಈ ಪ್ರಕ್ರಿಯೆಯಲ್ಲಿ ದುರ್ಬಲ ದೇಶಗಳು ಮೂಲೆಗೆ ತಳ್ಳಲ್ಪಡದ ಹಾಗೆ ನಾವು ನೋಡಿಕೊಳ್ಳಬೇಕಾಗಿದೆ. ಇದೇ ಇಂದಿನ ಅತ್ಯಂತ ದೊಡ್ಡ ಸವಾಲು...."

("ಭವನ್ಸ್ ಜನರಲ್ ಸಾಭಾರ)
ಅನು : ಸು ಕೌ

ಲೋಕಸೇವಕ ಜಯಪ್ರಕಾಶ ನಾರಾಯಣ

– ವಿನೋಬಾ

[ಇಡೀ ಆಧ್ಯಾತ್ಮಿಕ ಚಿಂತನದ ಗುರಿ 'ಗುಣಗ್ರಹಣ' ಎಂಬುದಾಗಿ ಭಾವಿಸಿದ್ದ ಸಂತ ವಿನೋಬಾ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು; ಕಾರಾಗೃಹ ವಾಸ ಅನುಭವಿಸಿದ್ದರು; ಆಶ್ರಮಗಳನ್ನು ಸ್ಥಾಪಿಸಿದ್ದರು. ಅವರು ತಮ್ಮ ಸಮಕಾಲೀನ ವ್ಯಕ್ತಿಗಳನ್ನು ರೇಖಾ ಚಿತ್ರಣದಂತೆ ಪರಿಚಯ ಮಾಡಿಕೊಟ್ಟಿದ್ದಾರೆ. ಅಂಥ ಲೇಖನಗಳ ಸರಣಿಯಲ್ಲಿ ಇದು ಹನ್ನೊಂದನೆಯದು. - ಸಂ.]

"ಹಣ ನಮ್ಮ ಸಾಮಾಜಿಕ ಜೀವನವನ್ನು ದೋಷಮಯ ಮಾಡುತ್ತದೆ; ಆದ್ದರಿಂದ ವ್ಯವಹಾರಿಕ ಜೀವನವನ್ನು ಶುದ್ಧಗೊಳಿಸುವುದಕ್ಕಾಗಿ ಹಣದ ಉಚ್ಛೇದನ ಮಾಡುವುದು ಅಗತ್ಯವಾಗಿದೆ" – ಈ ವಿಚಾರದೊಂದಿಗೆ ನಾನು ಪವನಾರ ಆಶ್ರಮದಲ್ಲಿ ನನ್ನ ಕಾಂಚನ ಮುಕ್ತಿಯ ಪ್ರಯೋಗವನ್ನು ಪ್ರಾರಂಭಿಸಿದ್ದೆ.

ಜಯಪ್ರಕಾಶ್ ವಿದ್ಯಾರ್ಜನೆಗಾಗಿ ಅಮೇರಿಕಾ ಹೋಗಿದ್ದರು. ಅವರು ಇಲ್ಲಿಂದ ಹಣ ತೆಗೆದುಕೊಂಡು ಹೋಗಿರಲಿಲ್ಲ. ಅಲ್ಲಿ ಅವರು ಕೂಲಿ ಮಾಡಿದರು. ಹೊಟೆಲ್‌ಗಳಲ್ಲಿ ಕೆಲಸ ಮಾಡಿದರು. ಹೀಗೆ ಹಣ ಸಂಪಾದನ ಮಾಡಿ ಅಧ್ಯಯನ ಮಾಡಿದರು. ಈ ರೀತಿ ಅವರ ಜೀವನದಲ್ಲಿ ಪುರುಷಾರ್ಥದ ಪ್ರೇರಣೆ ದೊರೆಯಿತು.

ಜಯಪ್ರಕಾಶಜಿ ಕಮ್ಯುನಿಜಂಗೆ ಸಂಬಂಧಿಸಿದ ಸಾಹಿತ್ಯವನ್ನು ಬಹಳಷ್ಟು ಓದಿದ್ದರು, ಅದನ್ನು ಜೀರ್ಣಿಸಿಕೊಂಡಿದ್ದರು. ಆದರೆ ದೇವರಿಲ್ಲದೆ 'ಗುಡನೆಸ್' ಗಾಗಿ (ಒಳ್ಳೆಯದಕ್ಕಾಗಿ) 'ಇನ್‌ಸೆಂಟಿವ್' (ಪ್ರೇರಣೆ) ಇರುವುದಿಲ್ಲವೆಂದು ಅವರಿಗೂ ಅನಿಸಿತ್ತು. ಪ್ರಪಂಚದಲ್ಲಿ ಪರಿಶುದ್ಧ ಚೈತನ್ಯ ವ್ಯಾಪಿಸಿದೆ, ಇದೇ ದೇವರು. ಆ ವ್ಯಾಪಕ ಪರಿಶುದ್ಧ ಚೈತನ್ಯದೊಂದಿಗೆ ಈ ಪಿಂಡದ ಚೇತನದ ಸಂಬಂಧ ಬರುವುದರಿಂದ ಈ ಚೇತನ ಶುದ್ಧವಾಗುತ್ತದೆ.

ಜಯಪ್ರಕಾಶರಲ್ಲಿ ಎರಡು-ಮೂರು ವಿಶೇಷತೆಗಳಿದ್ದವು. ಮೊದಲು ಜವಾಹರಲಾಲರ ನಂತರ ಪ್ರಧಾನಮಂತ್ರಿ ಯಾರಾಗುತ್ತಾರೆ ಎಂದು ಚರ್ಚೆ ನಡೆಯುತ್ತಿತ್ತು. ಆಗ ಜಯಪ್ರಕಾಶರ ಹೆಸರನ್ನು ಹೇಳುತ್ತಿದ್ದರು. ಆದರೆ ಜಯಪ್ರಕಾಶಜಿ ಎಂದೂ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಳ್ಳಲಿಲ್ಲ; ಅಧಿಕಾರದ ಅಭಿಲಾಷೆ ಅವರಿಗಿರಲಿಲ್ಲ. ಜನರು ಅವರಿಗೆ 'ಲೋಕನಾಯಕ' ಉಪಾಧಿಯನ್ನು ಕೊಟ್ಟರು. ಆದರೆ ಅವರು ತಮ್ಮನ್ನು ಎಂದೂ ಲೋಕ

ನಾಯಕನೆಂದು ಭಾವಿಸಿಕೊಳ್ಳಲಿಲ್ಲ; ಬದಲಿಗೆ, ತಮ್ಮನ್ನು ಲೋಕಸೇವಕನೆಂದೇ ತಿಳಿದುಕೊಂಡರು. ಒಂದು ವೇಳೆ ಅವರು ಬಯಸಿದ್ದರೆ ಪ್ರಧಾನಮಂತ್ರಿಯೋ, ರಾಷ್ಟ್ರಪತಿಯೋ ಆಗಬಹುದಿತ್ತು. ಆದರೆ ಅಂಥ ಬಯಕೆ ಅವರ ಮನಸ್ಸಿನಲ್ಲಿ ಎಂದೂ ಬರಲಿಲ್ಲ. ಅಷ್ಟೇ ಅಲ್ಲ, ಜನರ ಮಟ್ಟದಲ್ಲಿಯೇ ಇದ್ದು ಕೊಂಡು ಜನರ ಸೇವೆ ಮಾಡುತ್ತಿದ್ದರು. ಪ್ರತಿಯೊಂದು ಹಳ್ಳಿಯ ಜನರ, ಮುಖ್ಯ ವಾಗಿ ಬಡವರ, ಶಕ್ತಿ ಬೆಳೆಯಬೇಕು ಎಂಬುದೊಂದೇ ಅವರ ಬಯಕೆಯಾಗಿತ್ತು. ಅದಕ್ಕಾಗಿಯೇ ತಮ್ಮ ಇಡೀ ಜೀವನವನ್ನು ಅರ್ಪಿಸಿದ್ದರು. ಕೊನೆವರೆಗೂ ದರಿದ್ರನಾರಾಯಣನ ಸೇವೆ ಮಾಡುತ್ತ–ಮಾಡುತ್ತ ತಮ್ಮ ಜೀವನವನ್ನು ಸಾರ್ಥಕ ಮಾಡಿಕೊಂಡರು.

ಎರಡನೇ ವಿಶೇಷತೆ. ಅವರು ಗೃಹಸ್ಥಾಶ್ರಮಿಯಾಗಿದ್ದರೂ ಪತಿ – ಪತ್ನಿ ಯರು ಬ್ರಹ್ಮಚರ್ಯದಿಂದ ಇರುತ್ತಿದ್ದರು. ರಾಮಕೃಷ್ಣ ಪರಮಹಂಸ ಬ್ರಹ್ಮ ಚಾರಿ. ಅವರ ಮದುವೆ ಮಾಡಲಾಯಿತಾದರೂ ಪತ್ನಿ ಶಾರದಾದೇವಿ ಬ್ರಹ್ಮ ಚಾರಿಣಿಯಾಗಿಯೇ ಉಳಿದರು. ಇದಕ್ಕೆ ವಿರುದ್ಧವಾದ ಕಥೆ ಜಯಪ್ರಕಾಶರದು. ಪ್ರಭಾವತಿ ಬಾಪೂರವರ ಸೇವೆಯಲ್ಲಿ ತೊಡಗಿದ್ದರು; ಬಾಪೂರೊಂದಿಗೆ ಅವರ ನಿಕಟ ಸಂಬಂಧವಿತ್ತು. ಬಾಪೂರ ವಿಚಾರಗಳ ಕಾರಣದಿಂದಾಗಿ ಪ್ರಭಾವತಿ ಯವರ ಮೇಲೆ ಬ್ರಹ್ಮಚರ್ಯದ ಪ್ರಭಾವವಿತ್ತು. ಜಯಪ್ರಕಾಶಜಿ ಹೇಳಿದರು, "ನಾನು ನಿನಗೆ ಅನುಕೂಲವಾಗಿಯೇ ಇರುತ್ತೇನೆ". ಇದು ಬಹಳ ಸಹಜವಾಗಿಯೇ ಇತ್ತು. "ನಾನೇನೋ ಬಹಳ ದೊಡ್ಡ ಕೆಲಸ ಮಾಡಿದ್ದೇನೆ" ಎಂಬ ಅಹಂ ಅವರ ಮಾತಿನಲ್ಲಿರಲಿಲ್ಲ. ಈ ಮಾತು ಬೇರೆಯವರಿಗೆ ಗೊತ್ತಾಗದಷ್ಟು ಸಹಜ ನಿರಹಂಕಾರಿ ಆಗಿದ್ದರು ಅವರು. ಗಾಂಧೀಜಿ ಕಸ್ತೂರಬಾರನ್ನು 'ಮಾತಾ' ಎಂದು ತಿಳಿದಿದ್ದರು; ಇದು ಎಲ್ಲರಿಗೂ ಗೊತ್ತು. ಅರವಿಂದ ಮತ್ತು ರಾಮಕೃಷ್ಣರ ಮಾತು ಜಾಹಿರವೇ ಇದೆ. ಆದರೆ ಜಯಪ್ರಕಾಶರ ಮಾತು ಯಾರಿಗೂ ಗೊತ್ತಿಲ್ಲ. ಪ್ರಪಂಚದಲ್ಲಿ ಇಂಥ ಸಂಗತಿ ಕಡಿಮೆ.

ಜಯಪ್ರಕಾಶರ ಮೂರನೇ ವಿಶೇಷತೆ ಅವರ ನಮ್ರತೆ, ಸರಳತೆ ಮತ್ತು ಸ್ನೇಹ. ಅವರ ಅನೇಕ ಗುಣಗಳ ಪ್ರಭಾವ ನನ್ನ ಮೇಲೆ ಉಂಟಾಗಿದೆ. ಅವುಗಳಲ್ಲಿ ಅವರ ಹೃದಯದ ಸರಳತೆ ನನಗೆ ಬಹಳ ಪ್ರಿಯವಾಗಿತ್ತು.

ಗಾಂಧೀನಿಧಿಯು ಗಾಂಧೀ–ಜನ್ಮಶತಾಬ್ದಿ ಮಹೋತ್ಸವದ ಕಾರ್ಯ ಕ್ರಮವನ್ನು ನಿರ್ಧಾರಮಾಡಿತ್ತು. ಅದರಲ್ಲಿ ಅಧ್ಯಯನ ಗೋಷ್ಠಿ, ವಾಚನಾಲಯ ಮತ್ತು ಖಾದಿ ಇತ್ಯಾದಿ ಕಾರ್ಯಕ್ರಮಗಳಿದ್ದವು. ಜೇ. ಪಿ. ಅದರ ಸದಸ್ಯರಾಗಿ ದ್ದರು. ನಾನು ಅವರ ಲೇಖನವೊಂದನ್ನು ಓದಿದೆ. ಅವರು ಅದರಲ್ಲಿ ಈ

ರೀತಿ ಬರೆದಿದ್ದರು, "ಅನೇಕ ಕಾರ್ಯಕ್ರಮಗಳೇನೋ ಇವೆ, ಆದರೆ ಕ್ರಾಂತಿ ಕಾರಿಯಾದ ಕಾರ್ಯಕ್ರಮ ಯಾವುದೂ ಇಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ಗಾಂಧೀ ನಿಧಿ ಐದು ವರ್ಷಗಳ ವರೆಗೆ ಗ್ರಾಮದಾನ ಮತ್ತು ಖಾದಿಯ ಕೆಲಸ ವನ್ನು ಕೈಗೆತ್ತಿಕೊಳ್ಳಲಿ." ಆಗ ನನಗೆ ಜ್ಞಾಪಕ ಬಂತು ಒಂದು ಹೆಣ್ಣು ಸಿಂಹದ ಕಥೆ. ನರಿಯು ಒಂದು ಮರಿ ಈ ಸಿಂಹದ ಮುಂದೆ ತನ್ನ ಶೂರತೆಯ ಮಾತನ್ನು ಕೊಚ್ಚಿಕೊಳ್ಳಲಾರಂಭಿಸಿತು. ಎಲ್ಲವನ್ನೂ ಕೇಳಿದ ನಂತರ ಆ ಸಿಂಹ, "ನಿಃಸಂದೇಹವಾಗಿಯೂ ನೀನು ಶೂರನಿದ್ದೀಯೆ. ಆದರೆ ನೀನು ಯಾವ ಕುಲ ದಲ್ಲಿ ಹುಟ್ಟಿದ್ದೀಯೋ ಆ ಕುಲದಲ್ಲಿ ಆನೆಯ ಬೇಟೆಮಾಡಲಾಗುವುದಿಲ್ಲವಲ್ಲ" ಎಂದು ಹೇಳಿತು. ನಮ್ಮ ಅನೇಕ ಕೆಲಸಗಳು ನರಿಮರಿಯ ಈ ಮಾತಿನಂತೆ ಇರು ತ್ತವೆ. ಅವು ಯಾವವೂ ಪರಾಕ್ರಮದ ಕೆಲಸಗಳಾಗಿರುವುದಿಲ್ಲ. ಬೇರೆ-ಬೇರೆ ಸಂದರ್ಭಗಳಲ್ಲಿ ಚಿಕ್ಕ ಪುಟ್ಟ ಕೆಲಸಗಳು ನಡೆಯಬಹುದು. ಆದರೆ ಗಾಂಧೀಜಿ ಯವರ ಹೆಸರಿನಲ್ಲಿ ಕೆಲಸ ನಡೆದಾಗ ಅದರ ಸತ್ವ ಪರೀಕ್ಷೆ 'ಕ್ರಾಂತಿ'ಯೇ ಆಗಿರುತ್ತದೆ.

ಜಯಪ್ರಕಾಶರ ಶರೀರ ದಣಿದಿತ್ತು. ಸ್ನೇಹಿತರ ಒತ್ತಾಯದ ಕಾರಣದಿಂದ ಅವರು ವಿಶ್ರಾಂತಿಗಾಗಿ ಹಿಮಾಲಯಕ್ಕೆ ಹೋಗಿದ್ದರು. ಅಷ್ಟರಲ್ಲಿ ಬಿಹಾರ್ ನಲ್ಲಿ ನಮ್ಮ ಕಾರ್ಯಕರ್ತರನ್ನು ಕೊಲ್ಲುವುದಾಗಿ ನಕ್ಸಲೀಯರು ಹೆದರಿಕೆ ಹಾಕಿ ದರು. ಈ ಸುದ್ದಿ ಜಯಪ್ರಕಾಶರಿಗೆ ತಲುಪಿತು. ಆ ಕೂಡಲೆ ಅವರು ಅಲ್ಲಿಗೆ ಧಾವಿಸಿದರು ಮತ್ತು ಕಾರ್ಯಕರ್ತರ ರಕ್ಷಣೆಗಾಗಿ ತಮ್ಮ ಪ್ರಾಣವನ್ನು ಪಣವಾಗಿಟ್ಟರು. ನಕ್ಸಲೀಯರು ತಮ್ಮ ಕೆಲಸ ಪ್ರಾರಂಭಿಸಿದ್ದರು. ಭೂ ಮಾಲೀಕರ ಕೊಲೆ ಮಾಡುತ್ತಿದ್ದರು. ಜಯಪ್ರಕಾಶರ ಕೊಲೆಯೂ ಆಗುವ ಸಾಧ್ಯತೆ ಇತ್ತು. ಜಯಪ್ರಕಾಶರು ಅಲ್ಲಿಗೆ ಹೋದಾಗ ಕೆಲವರು, "ಇನ್ನು ಮೇಲೆ ಕ್ರಾಂತಿಗೆ ಹೊಸ ತಿರುವು ಸಿಗುವುದು" ಎಂದು ಅಂದರು. ಆದರೆ ಇದೆಲ್ಲದರ ಬೆಲೆ ಕಡಿಮೆ. ಯಾವ ಸ್ನೇಹದ ಕಾರಣದಿಂದ ಅವರು ಧಾವಿಸಿ ಬಂದರೋ ಅದರ ಬೆಲೆ ಬಹಳ.

ಜಯಪ್ರಕಾಶರ ಕೆಲಸವನ್ನು ವಿಚಾರ ಭೇದವಿದ್ದಾಗ್ಯೂ ನಾನು ವಿರೋಧ ಮಾಡುತ್ತಿರಲಿಲ್ಲ. ಇದಕ್ಕೆ ಕಾರಣವಾಗಿ ನಾನು ಈ ರೀತಿ ಹೇಳುತ್ತಿದ್ದೆ: "ನಂಬರ್ ಒಂದು, ಅವರು ಸಜ್ಜನರಾಗಿದ್ದಾರೆ; ನಂಬರ್ ಎರಡು, ಅವರು ನಿಃಸ್ವಾರ್ಥಿ ಯಾಗಿದ್ದಾರೆ; ನಂಬರ್ ಮೂರು, ಅವರು ತಪ್ಪೆಂದು ಗೊತ್ತಾದಾಗ ಅದನ್ನು ಒಪ್ಪಿಕೊಳ್ಳುತ್ತಾರೆ ಮತ್ತು ಅದನ್ನು ಹಿಂದೆಗೆದುಕೊಳ್ಳುತ್ತಾರೆ."

(೧೯ ನೇ ಪುಟ ನೋಡಿ

ಜಾಗತೀಕರಣದ ಸವಾಲಿಗೆ ರಾಷ್ಟ್ರೀಯ ಕಾರ್ಯತಂತ್ರ ಅಗತ್ಯ

–ಅಟಲ್ ಬಿಹಾರಿ ವಾಜಪೇಯಿ

[ಕಳೆದ ಜನವರಿ ಮೊದಲ ವಾರದಲ್ಲಿ ಕೇರಳದ ಕುಮಾರಕಂನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಕೊಟ್ಟ ಹೇಳಿಕೆ. - ಸಂ]

ಕಾಶ್ಮೀರದ ಪ್ರಶ್ನೆ ಮತ್ತು ರಾಮ ಜನ್ಮಭೂಮಿ ವಿವಾದದ ಬಗ್ಗೆ ನನ್ನ ಅಭಿಪ್ರಾಯಗಳನ್ನು ನಿನ್ನೆಯ ಲೇಖನದಲ್ಲಿ ನಿಮ್ಮೊಂದಿಗೆ ಹಂಚಿಕೊಂಡಿದ್ದೆ. ಈ ಎರಡೂ ಸಮಸ್ಯೆಗಳು ನಮಗೆ ಹಿಂದಿನವರ ಕೊಡುಗೆ. ನಾನಿಂದು ಮುಂದಿನ ಜನಾಂಗಕ್ಕೆ ನಾವು ನೀಡಬಹುದಾದ ಕೊಡುಗೆ ಬಗ್ಗೆ ನನ್ನ ಅನಿಸಿಕೆಗಳನ್ನು ಹಂಚಿಕೊಳ್ಳಲು ಬಯಸುತ್ತೇನೆ.

೧೯೪೭ ರಿಂದ ಇಂದಿನವರೆಗೆ ಭಾರತದ ವಿಕಾಸವನ್ನು ನೋಡುವುದರ ಜತೆಗೆ ಅದರಲ್ಲಿ ಭಾಗವಹಿಸುವ ಅವಕಾಶ ಪಡೆದ ಅದೃಷ್ಟಶಾಲಿಗಳಲ್ಲಿ ನಾನೂ ಒಬ್ಬ. ಒಬ್ಬ ವಿದ್ಯಾರ್ಥಿಯಾಗಿ ನಾನು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗ ವಹಿಸಿದ್ದೆ. ಪ್ರಧಾನ ಮಂತ್ರಿ ಜವಾಹರಲಾಲ ನೆಹರೂ ಆಗಸ್ಟ್ ೧೫ರ ಮಧ್ಯರಾತ್ರಿ ಕೆಂಪುಕೋಟೆಯಲ್ಲಿ ರಾಷ್ಟ್ರಧ್ವಜ ಹಾರಿಸುವುದನ್ನು ೨೨ರ ಹರಯದ ಯುವಕನಾಗಿ ನೋಡಿ ಸಂತಸ ಪಟ್ಟಿದ್ದೆ. ಆದರೆ ಹತ್ತು ವರ್ಷಗಳ ನಂತರ ನಾನು ಅವರ ಜತೆಯಲ್ಲಿ ಸಂಸತ್‌ನಲ್ಲಿ ಭಾಗವಹಿಸಿ ದೇಶದ ವ್ಯವಹಾರಗಳನ್ನು ಚರ್ಚಿಸುವ ಅವಕಾಶ ಪಡೆಯುತ್ತೇನೆ ಎಂಬ ಕಲ್ಪನೆಯೂ ಆಗ ನನಗಿರಲಿಲ್ಲ. ಒಬ್ಬ ಸಾಮಾನ್ಯ ಹಳ್ಳಿಶಿಕ್ಷಕನ ಮಗ ದೇಶದ ಪ್ರಧಾನಿಯಾಗಲು ಸಾಧ್ಯವಾಗಿರುವುದು ಭಾರತದ ಪ್ರಜಾಪ್ರಭುತ್ವದ ನಿಜವಾದ ಶಕ್ತಿ. ಭಾರತದ ಪ್ರಜಾಪ್ರಭುತ್ವದಲ್ಲಿ ಈಗ ವಂಶಪಾರಂಪರ್‍ಯದ ಆಡಳಿತ ಕೊನೆಗೊಂಡಿದೆ

ಸ್ವತಂತ್ರ ಭಾರತದ ಐದು ದಶಕಗಳ ಕಾಲ ಸಾಗಿ ಬಂದ ದಾರಿಯತ್ತ ಹಿನ್ನೋಟ ಹರಿಸಿದರೆ ನನ್ನ ಮನಸ್ಸಿನಲ್ಲಿ ಹೆಮ್ಮೆ ಮತ್ತು ನಿರಾಶೆ ಎರಡೂ ಸಮನಾಗಿ ಮೂಡುತ್ತದೆ. ನಮಗೆಲ್ಲರಿಗೂ ಅತ್ಯಮೂಲ್ಯವಾದ ದೇಶದ ಏಕತೆ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉಳಿಸಿಕೊಂಡು ಬರುವಲ್ಲಿ ಪಡೆದ ಯಶಸ್ಸು ಹೆಮ್ಮೆಯ ವಿಚಾರವಾಗಿದೆ. ನಮ್ಮ ನೆರೆಯ ಕೆಲವು ದೇಶಗಳೂ ಸೇರಿದಂತೆ ಹೊಸದಾಗಿ ಸ್ವಾತಂತ್ರ್ಯ ಪಡೆದ ದೇಶಗಳ ಸ್ಥಿತಿಗೆ ಹೋಲಿಸಿದರೆ ನಮ್ಮ ಸಾಧನೆ ಕಡಿಮೆಯೇನಲ್ಲ.

ಅಭಿವೃದ್ಧಿ ಮತ್ತು ಆಡಳಿತ ಎರಡೂ ರಂಗಗಳಲ್ಲಿ ಭಾರತ ಎದುರಿಸಿದಂತಹ ಸವಾಲುಗಳನ್ನು ಬಹಳಷ್ಟು ದೇಶಗಳು ಎದುರಿಸಲಿಲ್ಲ. ಆದರೂ ನಾವು ಪ್ರಜಾಪ್ರಭುತ್ವದ ದಾರಿಯನ್ನು ಬಿಟ್ಟುಗೊಡಲಿಲ್ಲ. ಜಗತ್ತಿನ ಬಹಳಷು

ಬಹು ಧರ್ಮ, ಬಹು ಭಾಷೆ ಮತ್ತು ಬಹು ಜನಾಂಗೀಯ ಸಮಾಜವನ್ನೊಳಗೊಂಡ ದೇಶಗಳು ಭಾರತೀಯರ ರೀತಿಯಲ್ಲಿ ವೈವಿಧ್ಯತೆಯಲ್ಲಿ ಏಕತೆಯನ್ನು ಪ್ರದರ್ಶಿಸುವ ದಿಟ್ಟತನವನ್ನು ತೋರಲಿಲ್ಲ.

ಅಭಿವೃದ್ಧಿ ಕ್ಷೇತ್ರದಲ್ಲಿ ಕೂಡಾ ನಮ್ಮ ಸಾಧನೆ ಹೆಮ್ಮೆ ಉಂಟುಮಾಡುವಂತಹದ್ದು. ವಿವಿಧ ರಂಗಗಳಲ್ಲಿ ಸ್ವಾವಲಂಬಿ ಪ್ರಗತಿಯನ್ನು ಸಾಧಿಸಲಿಕ್ಕೆ ಈ ವರೆಗಿನ ಎಲ್ಲಾ ಸರ್ಕಾರಗಳು ತಮ್ಮ ಕೊಡುಗೆಯನ್ನು ಸಲ್ಲಿಸಿವೆ. ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಭಾರತ ಅನುಸರಿಸಿದ ದೇಶೀಯ ನೀತಿ ಮತ್ತು ಕಾರ್ಯಕ್ರಮಗಳನ್ನು ಹಲವಾರು ಅಭಿವೃದ್ಧಿಶೀಲ ದೇಶಗಳು ಮಾದರಿಯಾಗಿ ಪರಿಗಣಿಸಿವೆ. ನಮ್ಮಲ್ಲಿಯೇ ಕೆಲವರು ದೇಶದ ಸಾಧನೆಯನ್ನು ತೃಣೀಕರಿಸುತ್ತಾರೆ. ಈ ರೀತಿಯ ನಿರ್ಲಕ್ಷ್ಯದಿಂದ ಸಮುದಾಯದಲ್ಲಿ ಸಿನಿಕತನ, ನಿರುತ್ಸಾಹ ಮತ್ತು ಜಡತನ ಆವರಿಸುತ್ತದೆ.

ಭಾರತ ಹೊಂದಿರುವ ನಿರ್ವಿವಾದ ಸಾಮರ್ಥ್ಯ ಮತ್ತು ನಿಜವಾದ ಸಾಧನೆಯ ನಡುವಿನ ಅಗಾಧ ಅಂತರದ ಬಗ್ಗೆ ಭಾರತೀಯರೆಲ್ಲರಂತೆ ನಾನು ಕೂಡ ವ್ಯಾಕುಲಗೊಂಡಿದ್ದೇನೆ. ಐದು ದಶಕಗಳ ಸ್ವಾತಂತ್ರ್ಯದ ಹೊರತಾಗಿಯೂ ಲಕ್ಷಾಂತರ ಮಂದಿ ಭಾರತೀಯರು ತುತ್ತು ಕೂಳಿಗಾಗಿ ಮತ್ತು ಆಶ್ರಯಕ್ಕೆ ಸೂರಿಗಾಗಿ ಪರದಾಡುತ್ತಿರುವುದು ಪ್ರಧಾನಿಯಾಗಿ ನನಗೆ ಅತ್ಯಂತ ನೋವುಂಟು ಮಾಡುವ ವಿಚಾರ. ಬಹುತೇಕ ಕುಟುಂಬಗಳು ಇಂದಿಗೂ ಕುಡಿಯುವ ನೀರು ಮತ್ತು ಪ್ರಾಥಮಿಕ ವೈದ್ಯಕೀಯ ಚಿಕಿತ್ಸೆಯ ಸೌಲಭ್ಯದಿಂದ ವಂಚಿತವಾಗಿವೆ. ಮಕ್ಕಳು ಒಳ್ಳೆಯ ಆಹಾರ, ಶಿಕ್ಷಣ ಮತ್ತು ಪಾಲನೆಯಿಂದ ವಂಚಿತರಾದರೆ ಆ ನಷ್ಟ ಕೇವಲ ಅವರದ್ದಾಗಲಿ, ಅವರ ಕುಟುಂಬದವರದ್ದಾಗಲಿ ಅಲ್ಲ, ಅದರಿಂದ ದೇಶ ತನ್ನ ಸರ್ವಾಂಗೀಣ ಅಭಿವೃದ್ಧಿಗೆ ಬೇಕಾದ ಮಾನವ ಸಂಪನ್ಮೂಲವನ್ನು ಕಳೆದುಕೊಳ್ಳಬೇಕಾಗುತ್ತದೆ.

ಈ ಕಟುವಾಸ್ತವವನ್ನು ನಾವು ಬದಲಾಯಿಸಬೇಕಾಗಿದೆ ಮತ್ತು ಬದಲಾಯಿಸಲು ನಮ್ಮಿಂದ ಸಾಧ್ಯ. ಮೂಲಭೂತ ಅಭಿವೃದ್ಧಿಯಲ್ಲಿನ ಕೊರತೆಯನ್ನು ನಿವಾರಿಸಲು ನಮಗೆ ಪ್ರಾಕೃತಿಕವಾದ ಸಂಪನ್ಮೂಲದ ಕೊರತೆಯಿಲ್ಲ. ನಮ್ಮಲ್ಲಿ ಪ್ರತಿಭಾವಂತ ಮತ್ತು ಕಠಿಣ ದುಡಿಮೆಯ ಜನಶಕ್ತಿ ಇದೆ. ವಿದೇಶಕ್ಕೆ ಹೋಗಿ ನೆಲೆಸಿರುವ ಅನೇಕ ಭಾರತೀಯರು ಆಶ್ಚರ್ಯಕರ ಸಾಧನೆಯನ್ನು ಮಾಡಿ ಅವರಿಗೆ ಮಾತ್ರವಲ್ಲ ತಮ್ಮ ದೇಶಕ್ಕೂ ಕೀರ್ತಿ ತಂದಿದ್ದಾರೆ. ಭಾರತೀಯರು ಹೊರದೇಶಗಳಿಗೆ ಹೋಗಿ ಅಲ್ಲಿನ ಎಲ್ಲಾ ಸವಾಲುಗಳನ್ನು ಎದುರಿಸಿ ಯಶಸ್ಸು ಸಾಧಿಸುವುದು ಸಾಧ್ಯವಾದರೆ ಭಾರತದಲ್ಲಿಯೇ ಅದು ನಮಗೆ ಯಾಕೆ ಸಾಧ್ಯವಾಗುವುದಿಲ್ಲ ಎಂದು ನಾನು ಅನೇಕ ಬಾರಿ ಪ್ರಶ್ನಿಸಿಕೊಂಡಿದ್ದೇನೆ.

ಎಲ್ಲರೂ ಸಮೃದ್ಧಿಯಿಂದ ಬದುಕುವ ವಾತಾವರಣವನ್ನು ನಿರ್ಮಿಸಲು ನಮ್ಮಿಂದ ಸಾಧ್ಯ. ಬಡತನ, ನಿರುದ್ಯೋಗ ಮೊದಲಾದ ಅಭಿವೃದ್ಧಿಶೀಲ ರಾಷ್ಟ್ರಗಳ ಪಾಲಿನ ಶಾಪಗಳನ್ನು ತೊಡೆದು ಹಾಕುವುದು ಸಾಧ್ಯ. ಇದಕ್ಕೆ ರಾಷ್ಟ್ರೀಯ ದೃಷ್ಟಿಕೋನ, ಎಲ್ಲಾ ಜಾತಿ ಜನಾಂಗಗಳು ಒಮ್ಮತದಿಂದ ಒಪ್ಪು ವಂತಹ ಸಹಮತದ ಉದ್ದೇಶ ಮತ್ತು ದೃಢಸಂಕಲ್ಪ ಬೇಕಾಗಿದೆ.

ದೇಶವು ಸದೃಢವಾದ ರಾಷ್ಟ್ರೀಯ ಮನೋಬಲವನ್ನು ಗಳಿಸಿಕೊಂಡಾಗ ಅದು ಬಲಾಢ್ಯ ರಾಷ್ಟ್ರವಾಗಿ ರೂಪುಗೊಳ್ಳಲು ಸಾಧ್ಯ. ಮನೋಬಲಕ್ಕೆ ಸಮ ನಾದದ್ದು ಯಾವುದೂ ಇಲ್ಲ. ಅದು ಮನುಷ್ಯನದ್ದಿರಬಹುದು ಇಲ್ಲವೇ ಒಂದು ದೇಶದ್ದಾಗಿರಬಹುದು. ಭಾರತ ದಾಸ್ಯದಲ್ಲಿದ್ದಾಗ ಸ್ವಾತಂತ್ರ್ಯವನ್ನು ಗಳಿಸುವುದು ನಮ್ಮ ಏಕಮಾತ್ರ ರಾಷ್ಟ್ರೀಯ ಲಕ್ಷವಾಗಿತ್ತು. ಸ್ವಾತಂತ್ರ್ಯಾ ನಂತರ ದೇಶದ ಸಂಪತ್ತನ್ನು ಬಳಸಿಕೊಂಡು ಅದೇ ರೀತಿಯ ದೃಢಸಂಕಲ್ಪ ದಿಂದ ಪ್ರಗತಿ ಸಾಧಿಸಲು ನಮ್ಮಿಂದ ಸಾಧ್ಯವಾಗಿಲ್ಲ.

ಭಾರತ ಮಾತೆಯ ಮಕ್ಕಳಾದ ನಾವೆಲ್ಲಾ ಒಂದೇ ಎಂಬ ಭಾವನೆಯನ್ನು ಮೊದಲು ಮೈಗೂಡಿಸಿಕೊಳ್ಳಬೇಕು. ನಮ್ಮದು ವಿಶಾಲವಾದ, ಅಷ್ಟೇ ವೈವಿಧ್ಯ ಮಯವಾದ ದೇಶ. ಇದರಿಂದಾಗಿ ನಾವು ಒಮ್ಮೊಮ್ಮೆ ನಮ್ಮದೇ ಆದ ಸಣ್ಣ ಸಣ್ಣ ಯೋಚನೆಗಳಲ್ಲಿ ಕಳೆದು ಹೋಗುತ್ತೇವೆ. ದೇಶದ ಒಟ್ಟು ಹಿತವನ್ನು ಮರೆತು ವೈಯುಕ್ತಿಕವಾದ ಹಿತಾಸಕ್ತಿಗೆ ಹೆಚ್ಚು ಗಮನ ನೀಡುತ್ತೇವೆ. ನಮ್ಮೆಲ್ಲರನ್ನು ಒಂದಾಗಿ ಸೇರಿಸಿರುವ ರಾಷ್ಟ್ರೀಯತೆಯ ಬಾಂಧವ್ಯವನ್ನು ಮರೆತು ಕೆಲವು ವೈವಿಧ್ಯತೆಯ ಅಂಗವಾದ ವಿಶಿಷ್ಟತೆಗಳ ಬಗ್ಗೆ ಕೆಲವರು ಆಗಾಗ ದೇಶದ ಗಮನ ಸೆಳೆಯುತ್ತಾರೆ. ಇನ್ನು ಕೆಲವರು ವೈವಿಧ್ಯತೆಯ ಅಂಶಗಳನ್ನು ಮರೆತು ಕೇವಲ ದೇಶದ ಏಕತೆಯ ಬಗ್ಗೆ ಮಾತನಾಡುತ್ತಾರೆ. ಈ ಎರಡೂ ವಿಚಾರ ಧಾರೆಗಳು ಸರಿಯಲ್ಲ. ವೈವಿಧ್ಯತೆ ವಿಭಜನೆಗೆ ಅವಕಾಶ ಕೊಡುವುದಿಲ್ಲ. ಅದೇ ರೀತಿ ಏಕತೆಯನ್ನು ಏಕರೂಪತೆಯ ಮೂಲಕ ಸಾಧಿಸಲಾಗುವುದಿಲ್ಲ.

ಸಮಾಜದಲ್ಲಿ ತಲೆ ಎತ್ತುತ್ತಿರುವ ಈ ರೀತಿಯ ಅಸಹನೆಯ ಭಾವನೆ ನನ್ನನ್ನು ಚಿಂತೆಗೀಡು ಮಾಡಿವೆ. ಇವನ್ನು ನಿಯಂತ್ರಿಸಲು ನಾವು ಪ್ರಯತ್ನಿಸ ಬೇಕಾಗಿದೆ. ಭಾರತ ಎಲ್ಲರಿಗೂ ಸೇರಿದ್ದು. ಇದರಲ್ಲಿ ಯಾರ ಪಾಲೂ ದೊಡ್ಡ ದಲ್ಲ, ಯಾರದ್ದೂ ಸಣ್ಣದಲ್ಲ. ಎಲ್ಲರೂ ಸೇರಿ ಭವಿಷ್ಯದ ಭಾರತವನ್ನು ಕಟ್ಟಬೇಕಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಹಕ್ಕಿನ ಬಗ್ಗೆ ಎಲ್ಲರೂ ಹೆಚ್ಚು ಒತ್ತು ನೀಡುತಿದ್ದಾರೆ. ಕರ್ತವ್ಯವನ್ನು ಮರೆಯುತ್ತಿದ್ದಾರೆ. ಇದು ಬದಲಾಗ ಬೇಕು.

ಭಾರತದ ಏಕತೆ ಜಾತ್ಯತೀತ ಆಶಯದಿಂದ ರೂಪುಗೊಂಡದ್ದಾಗಿದೆ. ಅದು ಪರಸ್ಪರರ ನಂಬಿಕೆ, ಆಚರಣೆ ಮತ್ತು ಪರಂಪರೆಗಳನ್ನು ಗೌರವಿಸಲು ಕಲಿಸುತ್ತದೆ. ಜಾತ್ಯತೀತತೆ ಎಂಬುದು ನಾವು ಅನಿವಾರ್ಯವಾಗಿ ಹೊರಗಿನಿಂದ ಆಮದು ಮಾಡಿಕೊಂಡ ವಿಚಾರವಲ್ಲ. ಅದು ಈ ದೇಶದ ಸಂಸ್ಕೃತಿ ಮತ್ತು ಆಶಯದಲ್ಲಿಯೇ ಮಿಳಿತವಾಗಿದೆ.

ಇದು ದೇಶದ ಸಾಮಾಜಿಕ ಸತ್ಯ. ಹೀಗಿರುವಾಗ ಇಲ್ಲಿನ ರಾಜಕೀಯ ಮಾತ್ರ 'ಕೋಮುವಾದಿ' ಮತ್ತು 'ಜಾತ್ಯತೀತ' ಎಂದು ಹಂಚಿಹೋಗಿರುವುದು ನನಗೆ ಆಶ್ಚರ್ಯವುಂಟುಮಾಡುತ್ತಿದೆ. ಜಾತ್ಯತೀತ ಮನೋಭಾವವನ್ನು ಹೊಂದಿರದ ಯಾವುದೇ ಪಕ್ಷವನ್ನು ಈ ದೇಶದ ಜನ ಒಪ್ಪುವುದಿಲ್ಲ. ಜನ ಕೋಮುವಾದಿ ರಾಜಕೀಯವನ್ನು ಬೆಂಬಲಿಸುತ್ತಾರೆ ಎಂದು ತಿಳಿದುಕೊಂಡರೆ ಅದು ಪ್ರಜಾತಾಂತ್ರಿಕ ಬುದ್ಧಿವಂತಿಕೆಗೆ ಮಾಡುವ ಅಗೌರವ.

ಪ್ರಸ್ತುತವಲ್ಲದ ವಿಷಯಗಳನ್ನು ಬದಿಗಿಟ್ಟು ದೇಶದ ರಾಜಕೀಯ ಮತ್ತು ಆಡಳಿತ ವ್ಯವಸ್ಥೆ, ಸಮಾನ ಆರ್ಥಿಕತೆ ಮತ್ತು ಸಾಮಾಜಿಕ ಅಭಿವೃದ್ಧಿಯ ಕಡೆ ಹೆಚ್ಚು ಗಮನ ನೀಡಬೇಕಾಗಿದೆ. ಜನರಲ್ಲಿ ಅಭಿವೃದ್ಧಿಯ ಹಸಿವು ಹೆಚ್ಚಾಗುತ್ತಿದೆ. ಆದರೆ ಆ ಹಸಿವನ್ನು ತೀರಿಸಲು ಸರ್ಕಾರಿ ಯಂತ್ರ ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಮ್ಮ ಜನರ ಬೇಡಿಕೆಗಳು ಬಹಳ ಸರಳವಾದುದು. ಅವರಿಗೆ ಬೇಕಾಗಿರುವುದು ರಸ್ತೆ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಮುಂತಾದ ಸೌಲಭ್ಯಗಳು.

ಜನರ ಬೇಡಿಕೆಗಳನ್ನು ಈಡೇರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಯೋಜನೆಗಳನ್ನು ರೂಪಿಸಿ ಅದಕ್ಕೆ ಮುಂಗಡ ಪತ್ರದಲ್ಲಿ ಹಣ ಒದಗಿಸುತ್ತವೆ. ಆದರೆ ಅನುಷ್ಠಾನದ ಹಂತದಲ್ಲಿ ಅದು ವಿಫಲಗೊಳ್ಳುತ್ತಿದೆ. ಕಳಪೆ ಕಾಮಗಾರಿ ಮತ್ತು ಅನುಷ್ಠಾನದಲ್ಲಿ ವಿಳಂಬ ಬಹಳಷ್ಟು ಯೋಜನೆಗಳ ವೈಫಲ್ಯಕ್ಕೆ ಕಾರಣ. ಇದರಿಂದ ದಿಟವಾಗಿ ನಷ್ಟಕ್ಕೀಡಾಗಿರುವವರು ದಲಿತರು, ಆದಿವಾಸಿಗಳು ಮತ್ತು ಹಿಂದುಳಿದ ಜನಾಂಗದ ಜನರು.

ಅಭಿವೃದ್ಧಿಯಲ್ಲಿ ಸುಧಾರಣೆಗಳನ್ನು ಕಾರ್ಯರೂಪಕ್ಕೆ ತರಬೇಕಾದ ಕಾಲ ಸನ್ನಿಹಿತವಾಗಿದೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಪಾರದರ್ಶಕವಾದ ಉತ್ತರದಾಯಿತ್ವವನ್ನು ಕಡ್ಡಾಯಗೊಳಿಸುವುದರ ಜೊತೆಗೆ ಅಭಿವೃದ್ಧಿ ಚಟುವಟಿಕೆಗಳ ಎಲ್ಲಾ ಹಂತಗಳಲ್ಲಿ ಜನರು ಭಾಗವಹಿಸುವಂತೆ ಮಾಡಬೇಕು. ಇದರ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಪನ್ಮೂಲದ ಬಹುದೊಡ್ಡ ಭಾಗವನ್ನು ಕಬಳಿ

ಸುತ್ತಿರುವ ಭ್ರಷ್ಟಾಚಾರವನ್ನು ನಿಯಂತ್ರಿಸಲು ಸಾಧ್ಯವಾಗಬಹುದು. ಅವಶ್ಯಕ ಸೌಲಭ್ಯಗಳನ್ನು ಪಡೆಯುವ ಅಧಿಕಾರವನ್ನಷ್ಟೆ ಜನರಿಗೆ ನೀಡಿದರೆ ಸಾಲದು, ಅವುಗಳ ಈಡೇರಿಕೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅಧಿಕಾರವನ್ನೂ ಅವರಿಗೆ ನೀಡಬೇಕು. ಪ್ರಜಾಪ್ರಭುತ್ವ ವ್ಯವಸ್ಥೆ ಅರ್ಥಪೂರ್ಣವಾಗಬೇಕಾದರೆ ಈ ರೀತಿ ಸರ್ಕಾರ ಮತ್ತು ಜನರ ನಡುವೆ ಸಹಭಾಗಿತ್ವ ಸಾಧ್ಯವಾಗಬೇಕು.

ಇದು ದೇಶದ ಪ್ರಜೆಗಳ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ. ಪ್ರತಿಯೊಂದು ಸಮಸ್ಯೆಯ ಪರಿಹಾರಕ್ಕೆ ಜನರು ಸರ್ಕಾರದತ್ತ ನೋಡುವ ಬದಲಿಗೆ ಆ ಸಮಸ್ಯೆಗಳನ್ನು ಪರಿಹರಿಸುವ ಸರ್ಕಾರದ ಪ್ರಯತ್ನದಲ್ಲಿ ಅವರೇ ನೇರವಾಗಿ ಭಾಗಿಯಾಗುವಂತೆ ಮಾಡಬೇಕಾಗಿದೆ. ಇದು ಉತ್ತಮ ಶ್ರಮ ಸಂಸ್ಕೃತಿ. ಈ ಮೂಲಕ ಜನತೆಯ ಗಮನವನ್ನು ಹಕ್ಕುಗಳಿಂದ ಕರ್ತವ್ಯದತ್ತ ಹರಿಸಲು ಸಾಧ್ಯವಾಗುತ್ತದೆ. ಇದರಿಂದ ಸಂಸತ್ ವಿಧಾನಮಂಡಲ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಪ್ರಜಾಪ್ರತಿನಿಧಿಗಳ ಜವಾಬ್ದಾರಿ ಕೂಡ ಹೆಚ್ಚಾಗುತ್ತದೆ.

ಈ ಸಂದರ್ಭದಲ್ಲಿ ದೇಶದ ಜನತೆಯ ಜತೆ ನನ್ನ ಇನ್ನೊಂದು ವಿಚಾರವನ್ನು ಹಂಚಿಕೊಳ್ಳಬೇಕೆನಿಸುತ್ತದೆ. ಆರ್ಥಿಕ ಸುಧಾರಣೆಯ ವಿಚಾರ ಪ್ರಸ್ತಾಪವಾದಕೂಡಲೇ ನಮ್ಮಲ್ಲಿ ಕೆಲವರು ದೇಶದ ಭವಿಷ್ಯದ ಬಗ್ಗೆ ಭೀತಿ ವ್ಯಕ್ತಪಡಿಸುತ್ತಾರೆ. ದೇಶ ಬಿಕ್ಕಟ್ಟು ಎದುರಿಸಲಿದೆ ಎನ್ನುತ್ತಾರೆ. ದೇಶ ಹೇಗೆ ವಿದೇಶಿ ವ್ಯಾಪಾರಿ ಸಂಸ್ಥೆಗಳ ವಸಾಹತು ಮಾರ್ಪಟ್ಟಿತೆನ್ನುವುದನ್ನು ಉಲ್ಲೇಖಿಸುವ ಅವರು ಈಗಿನ ರೀತಿಯಲ್ಲಿಯೇ ಆರ್ಥಿಕ ಸುಧಾರಣೆ ಮುಂದುವರಿದರೆ ದೇಶ ಇನ್ನೊಮ್ಮೆ ವಿದೇಶಿ ಸಂಸ್ಥೆಗಳಿಗೆ 'ಮಾರಾಟ'ವಾಗುತ್ತದೆ ಎಂದು ಎಚ್ಚರಿಕೆ ನೀಡುತ್ತಿರುತ್ತಾರೆ.

ಭಾರತ ಒಂದು ಸ್ವತಂತ್ರ ಪ್ರಜಾಪ್ರಭುತ್ವ ದೇಶ. ಬ್ರಿಟಿಷರು ನಮ್ಮನ್ನು ವಸಾಹತುಶಾಹಿಗೆ ಒಳಪಡಿಸುವಾಗ ಇದ್ದ ಸ್ಥಿತಿ ಈಗಿಲ್ಲ. ನಾವೀಗ ಹೆಚ್ಚು ಬಲಶಾಲಿಗಳು. ಈಗ ಭಾರತವನ್ನು ಮಾರಾಟ ಮಾಡುವ ಧೈರ್ಯವಂತರು ಯಾರಿದ್ದಾರೆ? ಭಾರತವನ್ನು ಖರೀದಿಸುವ ಸಾಮರ್ಥ್ಯವುಳ್ಳ ಧೈರ್ಯವಂತರು ಎಲ್ಲಿದ್ದಾರೆ ?

ನಾವು ಸ್ಪಂದನಶೀಲ ಮತ್ತು ಸ್ವಾವಲಂಬಿ ಆರ್ಥಿಕ ವ್ಯವಸ್ಥೆಯನ್ನು ಹೊಂದಿದ್ದೇವೆ. ಬಡತನ ಮತ್ತು ನಿರುದ್ಯೋಗಕ್ಕೆ ಕಾರಣವಾಗಿರುವ ಆರ್ಥಿಕ ದೌರ್ಬಲ್ಯಗಳನ್ನು ನಿವಾರಿಸಿ ಆರ್ಥಿಕ ಕ್ಷೇತ್ರವನ್ನು ಇನ್ನಷ್ಟು ಬಲಪಡಿಸುವುದೇ ಆರ್ಥಿಕ ಸುಧಾರಣೆಯ ಮುಖ್ಯ ಉದ್ದೇಶ. ೧೯೯೧ ರಿಂದಲೇ ಎಲ್ಲ ಕೇಂದ್ರ ಸರ್ಕಾರಗಳು ಹಾಗೂ ಹಲವಾರು ರಾಜ್ಯ ಸರ್ಕಾರಗಳು ಆರ್ಥಿಕ ಸುಧಾರಣೆ

ಯನ್ನು ಅನುಸರಿಸುತ್ತಾ ಬಂದಿವೆ. ಬಹುತೇಕ ಎಲ್ಲಾ ರಾಜಕೀಯ ಪಕ್ಷಗಳು ಇದರಲ್ಲಿ ಪಾಲ್ಗೊಂಡಿವೆ. ಈ ಮೂಲಕ ಆರ್ಥಿಕ ಸುಧಾರಣೆಗೆ ಸಹಮತದ ನೆಲೆಗಟ್ಟು ಈಗಾಗಲೇ ಇದೆ. ಇನ್ನಷ್ಟು ರಾಜಕೀಯಗೊಳಿಸದೆ ಈ ನೆಲೆಗಟ್ಟನ್ನು ಬಲಪಡಿಸಲು ಎಲ್ಲರೂ ಸಹಕಾರ ನೀಡಬೇಕು.

ದಿನದಿಂದ ದಿನಕ್ಕೆ ಏರುತ್ತಿರುವ ಜನಸಂಖ್ಯೆಯ ಹೆಚ್ಚುತಿರುವ ಬೇಡಿಕೆಗಳನ್ನು ಈಡೇರಿಸಲು ದೇಶದ ಆರ್ಥಿಕ ಕ್ಷೇತ್ರಕ್ಕೆ ಸಾಧ್ಯವಾಗುವಂತೆ ಆರ್ಥಿಕ ಸುಧಾರಣೆಯ ನೆಲೆಯನ್ನು ವಿಸ್ತರಿಸಿ ಅದು ಇನ್ನಷ್ಟು ತ್ವರಿತಗತಿಯಲ್ಲಿ ಅನುಷ್ಠಾನಕ್ಕೆ ಬರುವಂತೆ ಮಾಡಬೇಕು. ನಾವೀಗ ಮಾಹಿತಿ ಕ್ರಾಂತಿ, ಜಾಗತಿಕ ವ್ಯಾಪಾರ ಮತ್ತು ದೇಶ-ದೇಶಗಳ ನಡುವಿನ ಪರಸ್ಪರ ಅವಲಂಬನೆಯಿಂದ ಸೃಷ್ಟಿಯಾಗಿರುವ ಜಾಗತೀಕರಣದ ಯುಗದಲ್ಲಿದ್ದೇವೆ. ಆರ್ಥಿಕ ಕ್ಷೇತ್ರದಲ್ಲಿ ವಿಶ್ವದ ಅನೇಕ ರಾಷ್ಟ್ರಗಳು ಬಹಿರಂಗವಾಗಿ ಪೈಪೋಟಿಗಿಳಿದಿವೆ. ದಶಕಗಳ ಹಿಂದೆ ಈ ಸ್ಥಿತಿ ಇರಲಿಲ್ಲ.

ಕಳೆದ ಕೆಲವು ದಿನಗಳಲ್ಲಿ ಕೇರಳದಲ್ಲಿ ನಾನು ಕೇಳಿದ್ದ ತೆಂಗು ಮತ್ತು ಅಡಿಕೆ ಬೆಳೆಗಾರರ ಸಮಸ್ಯೆ ನಿಜವಾದುದೆಂದು ನನಗೆ ಅರಿವಾಗಿದೆ. ಈ ಸ್ಥಳೀಯ ಸಮಸ್ಯೆಗಳ ಹಿನ್ನಲೆಯಲ್ಲಿ ಜಾಗೃತವಾಗಿರುವ ಜಾಗತೀಕರಣದ ಶಕ್ತಿಗಳನ್ನು ನಾನು ಸ್ಪಷ್ಟವಾಗಿ ಕಾಣುತ್ತಿದ್ದೇನೆ.

ದೇಶದ ಉದ್ಯಮಿಯಾಗಿರಲಿ, ರೈತನಾಗಿರಲಿ ಯಾರೂ ಕೂಡಾ ಪೈಪೋಟಿಯ ಜಾಗತಿಕ ಪರಿಸರವನ್ನು ನಿರ್ಲಕ್ಷ್ಯ ಮಾಡುವ ಹಾಗಿಲ್ಲ. ನಮ್ಮ ಉದ್ಯಮಿಗಳು ತಮ್ಮ ಉತ್ಪಾದನೆ ಮತ್ತು ನಿರ್ವಹಣೆಯ ವಿಧಾನವನ್ನು ಬದಲಾಯಿಸಿಕೊಳ್ಳಬೇಕು. ಕೃಷಿ ಕ್ಷೇತ್ರದಲ್ಲಿ ಪೂರ್ಣ ಪ್ರಮಾಣದ ಉತ್ಪಾದಕತೆಗೆ ಅಡ್ಡಿಯಾಗಿರುವ ಮೂಲ ಸೌಕರ್ಯ, ಬಂಡವಾಳ ಮತ್ತಿತರ ಕೊರತೆಗಳನ್ನು ನೀಗಿಸಲು ಪ್ರಯತ್ನ ನಡೆಯಬೇಕು. ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಿ ಗುಣಮಟ್ಟವನ್ನು ವೃದ್ಧಿಸಬೇಕು ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಹೊಂದಿಕೊಳ್ಳಬೇಕು.

ನಾವು ನಗರ ಮತ್ತು ಹಳ್ಳಿಗಳ ಮೂಲ ಸೌಕರ್ಯವನ್ನು ಅಭಿವೃದ್ಧಿಪಡಿಸಲೇಬೇಕಾಗಿದೆ. ಈ ದೃಷ್ಟಿಯಿಂದ ನಮ್ಮ ಸರ್ಕಾರದ ರಾಷ್ಟ್ರೀಯ ಹೆದ್ದಾರಿ ಯೋಜನೆ ಮತ್ತು ಗ್ರಾಮೀಣ ರಸ್ತೆ ಯೋಜನೆ ಪ್ರಮುಖವಾದುದು. ಖಾಸಗಿ ಕ್ಷೇತ್ರ ಮತ್ತು ಸರ್ಕಾರದ ಸಹಭಾಗಿತ್ವವನ್ನು ಉತ್ತಮಗೊಳಿಸಬೇಕು. ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಖಾಸಗಿಯವರ ಪಾತ್ರ ಈಗ ಹೆಚ್ಚು ಮಹತ್ವ

ಪಡೆಯುತ್ತಿದೆ. ಅವರೂ ಕೂಡ ದೇಶದ ಹಿತವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಲಾಭಗಳಿಕೆ ಒಂದೇ ಅವರ ಉದ್ದೇಶವಾಗಿರಬಾರದು. ಮಾಹಿತಿ ತಂತ್ರಜ್ಞಾನವನ್ನು ಆರ್ಥಿಕ ಕ್ಷೇತ್ರದ ಎಲ್ಲಾ ರಂಗಗಳಲ್ಲಿಯೂ ಅನುಷ್ಠಾನಕ್ಕೆ ತರಬೇಕು. ಹಣಕಾಸಿನ ಕ್ಷೇತ್ರದ ಕಾರ್ಯಕ್ಷಮತೆಯು ಸುಧಾರಣೆಯಾಗಬೇಕಾಗಿದೆ.

ಸರ್ಕಾರದ ಗಾತ್ರ ಕಡಿಮೆಯಾಗಬೇಕಾಗಿದೆ. ಅದರಿಂದ ಸರ್ಕಾರದ ಸಂಪನ್ಮೂಲದ ಹೆಚ್ಚಿನ ಭಾಗವನ್ನು ಜನರ ಕಲ್ಯಾಣ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ವಿನಿಯೋಗಿಸಲು ಸಾಧ್ಯವಾಗುತ್ತದೆ. ಹೆಚ್ಚು ಉದ್ಯೋಗ ಸೃಷ್ಟಿ ಮತ್ತು ತ್ವರಿತಗತಿಯಲ್ಲಿ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುವಂತೆ ಕಾರ್ಮಿಕ ಕಾನೂನುಗಳನ್ನು ಸುಧಾರಣೆಗೊಳಿಸಬೇಕಾಗಿದೆ. ಇವುಗಳಲ್ಲಿ ಕೆಲವು ಕ್ರಮಗಳ ಅನುಷ್ಠಾನ ಸುಲಭವಲ್ಲ. ಆದರೆ ಆ ಕಾರಣಕ್ಕಾಗಿ ಹಿಂದೆ ಸರಿಯಬಾರದು.

ಹೊರಗಿನ ದೇಶಗಳ ಅಕ್ರಮ ವಾಣಿಜ್ಯ ಮತ್ತು ಯೋಜನೆ ವಿಧಾನಗಳಿಂದ ದೇಶದ ಹಿತಾಸಕ್ತಿಗೆ ಯಾವುದೇ ಧಕ್ಕೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರ ಬದ್ಧವಾಗಿದೆ.

ಆದರೆ ಅಂತರರಾಷ್ಟ್ರೀಯ ವಾಣಿಜ್ಯ ವ್ಯವಹಾರ ಈಗ ಬಹುಪಕ್ಷೀಯ ಚೌಕಟ್ಟಿನಲ್ಲಿ ನಡೆಯುತ್ತಿದ್ದು ಆ ವ್ಯವಸ್ಥೆಗೆ ಭಾರತ ಕೂಡಾ ಸಹಿಹಾಕಿರುವುದರಿಂದ ಈಗ ಯಾವುದೇ ಪಕ್ಷ ಇಲ್ಲವೇ ಸರ್ಕಾರ ಹಿಂದಕ್ಕೆ ಸರಿಯುವ ಹಾಗಿಲ್ಲ.

ಜಾಗತೀಕರಣ ಒಡ್ಡಿರುವ ಸವಾಲಿಗೆ ಎದುರಾಗಿ ರಾಷ್ಟ್ರೀಯ ಕಾರ್ಯತಂತ್ರವನ್ನು ರೂಪಿಸುವುದು ಸಾಮೂಹಿಕ ಜವಾಬ್ದಾರಿಯಾಗಿದೆ. ಭಾರತದ ಭವಿಷ್ಯದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಇದು ಪ್ರಮುಖ ವಿಷಯವಾಗಿದ್ದು ಇದನ್ನು ಸಣ್ಣಪುಟ್ಟ ಲಾಭಗಳಿಗಾಗಿ ರಾಜಕೀಯಗೊಳಿಸುವುದು ಸರಿಯಲ್ಲ.

ನನ್ನೊಲವಿನ ದೇಶದ ಜನರೇ, ಹೊಸ ಶತಮಾನದಲ್ಲಿ ಭಾರತದ ಸರ್ವಾಂಗೀಣ ಅಭಿವೃದ್ಧಿಗೆ ಅಗಾಧವಾದ ಅವಕಾಶಗಳನ್ನು ನಾನು ಕಾಣುತ್ತಿದ್ದೇನೆ. ಈ ಅವಕಾಶಗಳನ್ನು ಜನರು ಉಪಯೋಗಿಸಿಕೊಳ್ಳುತ್ತಾರೆಂಬ ವಿಶ್ವಾಸ ನನಗಿದೆ. ನನ್ನ ನಿರೀಕ್ಷೆ ಈ ದೇಶದ ಯುವಜನಾಂಗವನ್ನು ಅವಲಂಬಿಸಿದೆ.

ಜಗತ್ತಿನಲ್ಲಿಯೇ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಯುವಜನರನ್ನು ಹೊಂದಿರುವ ದೇಶ ಭಾರತ. ಸನಾತನ ಮತ್ತು ಪ್ರಾಚೀನ ನಾಗರಿಕತೆಯ ವಿಶ್ವವ್ಯಾಪಿ ಮೌಲ್ಯಗಳಿಂದ ಮಾರ್ಗದರ್ಶನ ಪಡೆದ, ರಾಷ್ಟ್ರೀಯ ಅಭಿವೃದ್ಧಿಯ ಆಧುನಿಕ ದರ್ಶನದಿಂದ ಸ್ಫೂರ್ತಿ ಗಳಿಸಿದ ಮತ್ತು ಭಾರತ ಮಾತೆಯ ನೂರು

ಕೋಟಿ ಮಕ್ಕಳ ಯುವಶಕ್ತಿಯಿಂದ ಸಮೃದ್ಧಿ ಹೊಂದಿರುವ ನಾವು ೨೧ ನೇ ಶತಮಾನವನ್ನು ಭಾರತದ ಶತಮಾನವನ್ನಾಗಿ ಪರಿವರ್ತಿಸಲು ಸಾಧ್ಯ.

ಇದು ನನ್ನ ನಿರೀಕ್ಷೆ ಮತ್ತು ಹೊಸ ವರ್ಷದ ತೀರ್ವಾನ ಕುಮಾರಕಂನಿಂದ ನಿಮಗೆಲ್ಲರಿಗೆ ಇದನ್ನೇ ಹಾರೈಸುತ್ತಿದ್ದೇನೆ. ★

ಲೋಕಸೇವಕ ೧೧ ನೇ ಪುಟದಿಂದ

ಜಯಪ್ರಕಾಶರ ದೇಹದ ಮೃತ್ಯುವಾಯಿತಷ್ಟೆ. ಅವರು ಯಾವಾಗಲೂ ಸೂರ್ಯೋದಯಕ್ಕೆ ಮುನ್ನ ಒಂದು-ಒಂದೂವರೆ ತಾಸು ಮುಂಚೆ ಏಳುತ್ತಿದ್ದರು. ಆಧ್ಯಾತ್ಮಿಕ ಶಬ್ದ, ಸೂತ್ರ, ಮಂತ್ರ, ಇತ್ಯಾದಿಗಳನ್ನು ಗುಣಗುಣಿಸುತ್ತಿದ್ದರು. ಆ ದಿನ ಅವರು ಆರೂಮುಕ್ಕಾಲು ಗಂಟೆಗೆ ಹೋದರು. ಪ್ರಾರ್ಥನೆಯ ನಂತರ ನಿದ್ರೆಯಲ್ಲಿ ಹೋಗುವವರು ದೇವರ ಬಗ್ಗೆ ಚಿಂತನೆ ಮಾಡುತ್ತ ಹೋಗುತ್ತಾರೆ.

ನಾನು ಜಯಪ್ರಕಾಶರಿಗೆ 'ಜಪುಜಿ' ಎಂಬ ಹೆಸರು ಕೊಟ್ಟಿದ್ದೆ. ಜನರು ಅವರನ್ನು ಜೇ. ಪಿ. ಎಂದು ಕರೆಯುತ್ತಿದ್ದರು. ಜೇ. ಪಿ. ಎಂದರೆ ಜ.ಪ. ಅದಕ್ಕೆ ನಾನು ಪ್ರೇಮಪೂರ್ವಕವಾಗಿ 'ಉ' ಸೇರಿಸಿದೆ ಮತ್ತು ಗೌರವಕ್ಕಾಗಿ 'ಜಿ' ಸೇರಿಸಿದೆ. ಆಗ ಅದು 'ಜಪೂಜಿ' ಆಯಿತು. ಜಪುಜಿ ಎಂಬುದು ಗುರುನಾನಕರ ಸುಪ್ರಸಿದ್ಧ ಗ್ರಂಥ. ★

('ಮೈತ್ರಿ' ಸಾಭಾರ; ಅನು : ಸು.ಕೌ.)

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ - ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/- ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/- ರೂ. ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಮ್ರ ಕೋರಿಕೆ. —ಪ್ರಕಾಶಕರು

ಪುನಃ ಗಾಂಧೀ ಪ್ರಣೀತ ಸ್ವದೇಶಿ ಆಂದೋಲನ ಪ್ರಾರಂಭವಾಗಬೇಕು

–ಧರ್ಮಪಾಲ್

[ಲೇಖಕರು ಸುಪ್ರಸಿದ್ಧ ಚಿಂತಕರು ಮತ್ತು ವಿಚಾರವಾದಿಗಳು ಆಗಿದ್ದಾರೆ. ಅವರು ಮೂರು ದಶಕಗಳ ಕಾಲ ಬ್ರಿಟನ್‌ನಲ್ಲಿ ಇದ್ದುಕೊಂಡು ಭಾರತದ ಆಧುನಿಕ ಇತಿಹಾಸದ ಮೇಲೆ ಹೊಸದೃಷ್ಟಿ ಬೀರಿದ್ದಾರೆ. ದೇಶದ ಮುಖ್ಯ ವಿದ್ವಾಂಸರಲ್ಲಿ ಒಬ್ಬರಾಗಿದ್ದಾರೆ. -]

ಸಂಪರ್ಕ : ಸೇವಾಗ್ರಾಮ್ ಆಶ್ರಮಸೇವಾಗ್ರಾಮ್, ವಾರ್ಧಾ

ಸ್ವದೇಶಿಯ ಸ್ವರೂಪ ಹೇಗಿರಬೇಕು, ಇದನ್ನು ನಿರ್ಧರಿಸಲು ರಾಜ್ಯ ಮತ್ತು ಸಮಾಜಗಳೆರಡರ ವ್ಯವಸ್ಥೆ ಹೇಗೆ ಇರಬೇಕು ಎಂಬೀ ಪ್ರಶ್ನೆಗಳನ್ನು ಕುರಿತು ಆಲೋಚಿಸಬೇಕಾಗಿದೆ ಮತ್ತು ಇವುಗಳ ಮೂಲಾಧಾರ ಯಾವುದು ಎಂಬುದೂ ನಿಶ್ಚಿತಗೊಳ್ಳಬೇಕಾಗಿದೆ. ದೇಶದ ಬಹಳ ಹಣ ಲಂಚ ಅಥವಾ ದಳ್ಳಾಳಿತನದಲ್ಲಿ ಹಾಳಾಗುತ್ತಿದೆ ಎಂಬುದು ನಿಜವಾದರೂ ದೇಶದ ಸಮಸ್ಯೆಗಳು ಅದೆಲ್ಲಕ್ಕಿಂತ ಹೆಚ್ಚು ಗಂಭೀರವಾಗಿವೆ. ಇಂದು ಕೇವಲ ಲಂಚ ಅಥವಾ ದಳ್ಳಾಳಿಯಿಂದಷ್ಟೇ ಅಲ್ಲ, ಸರಕಾರದ ಬಳಿ ತಲಪುತ್ತಿರುವ ಎಲ್ಲ ತೆರಿಗೆಗಳೂ ಮತ್ತು ಸಾಲಗಳೂ ಸಹ ವ್ಯರ್ಥವಾಗಿ ಹೋಗುತ್ತಿವೆ. ಇಂಥ ಹಣದಿಂದ ಸರ್ಕಾರದ ಆಡಳಿತದಲ್ಲಿ ಸುಮಾರು ಒಂದು ಕೋಟಿ ಜನರಿಗೆ ನೌಕರಿ ಸಿಗುತ್ತಿರಬಹುದು. ಇಷ್ಟಲ್ಲದೆ ಈ ಆಡಳಿತದಿಂದ ಜನರಿಗೆ ಇನ್ನು ಯಾವುದೇ ಪ್ರಯೋಜನ ಆಗುತ್ತಿಲ್ಲ. ದೇಶದ ಬಹುಸಂಖ್ಯಾತ ಜನರಿಗಂತೂ ಇದರೊಂದಿಗೆ ಯಾವ ಸಂಬಂಧವೂ ಬರುವುದಿಲ್ಲ.

ಸರ್ಕಾರದ ಆಡಳಿತ ಮತ್ತು ಅಭಿವೃದ್ಧಿ ಯೋಜನೆಗಳು ನಡೆಯುವುದಕ್ಕಾಗಿ ದೇಶದ ಹಣವಷ್ಟೇ ಅಲ್ಲ, ಪ್ರಾಕೃತಿಕ ಸಂಪತ್ತು ಕೂಡ ಹಾಳಾಗುತ್ತಿದೆ. ಈ ದೇಶದ ಆಡಳಿತ ನಡೆಸುತ್ತಿರುವ ಒಂದೂವರೆ ಲಕ್ಷ ಜನರಿಗೆ ದೇಶದ ಸಾಧನೆಗಳ ರಕ್ಷಣೆಯ ಬಗ್ಗೆ ಯಾವ ವಿಶೇಷ ಚಿಂತೆಯೂ ಇಲ್ಲ. ಅವರೆಲ್ಲರೂ ಅಂತರ್‌ರಾಷ್ಟ್ರೀಯ ಪ್ರತಿಭೆಯುಳ್ಳವರಾಗಿದ್ದಾರೆ; ಇಲ್ಲಿಯ ಸಾಧನಗಳು ಮುಗಿದಾದ ಮೇಲೆ ಅವರು ಯುರೋಪ್ – ಅಮೇರಿಕಾಕ್ಕೆ ಹೋಗಬಹುದು. ಆದರೆ ಭಾರತದ ರೈತರು ಮತ್ತು ಇತರೆ ಸಾಮಾನ್ಯ ಜನರು ದೇಶವನ್ನು ಬಿಟ್ಟು ಹೋಗಲಾರರು. ಅವರು ಇಲ್ಲಿಯೇ ಇದ್ದು ಬದುಕಬೇಕಿದೆ, ಸಾಯಬೇಕಿದೆ. ಆದ್ದರಿಂದಲೇ ಇಲ್ಲಿಯ ಸಾಧನಗಳನ್ನು ಉಳಿಸಿಕೊಳ್ಳುವ ಚಿಂತೆಯನ್ನು

ಅವರೇ ಮಾಡಬೇಕಾಗಿದೆ. ಸಾಧನಗಳನ್ನು ಉಳಿಸಿಕೊಳ್ಳುವುದಕ್ಕಾಗಿ ವಿದೇಶಿ ಅನುಕರಣೆಯಿಂದ ನಡೆಯುತ್ತಿರುವ ವ್ಯವಸಾಯವನ್ನು, ನೀರಾವರಿಯನ್ನು, ಸಂಚಾರ ಮತ್ತು ಮಾಧ್ಯಮಗಳ ತಂತ್ರಜ್ಞಾನವನ್ನು ಹಾಗೂ ಸಮಾಜ ಮತ್ತು ಆಡಳಿತದ ವ್ಯವಸ್ಥೆ ಮುಂತಾದವುಗಳನ್ನು ಕುರಿತು ಎರಡನೇ ಬಾರಿಗೆ ಯೋಚನೆ ಮಾಡಬೇಕಿದೆ ಮತ್ತು ನಮ್ಮ ಸಾಧನಗಳನ್ನು ಗಮನದಲ್ಲಿರಿಸಿಕೊಂಡೇ ಎಲ್ಲ ಯೋಜನೆಗಳನ್ನು ಮತ್ತು ತಂತ್ರಜ್ಞಾನಗಳನ್ನು ಎರಡನೇ ಬಾರಿ ಹೂಡಬೇಕಿದೆ.

ರೈತರ ಇಂದಿನ ನಾಯಕರು ತಂತ್ರಜ್ಞಾನ ಮತ್ತು ವ್ಯವಸ್ಥೆಯ ಬಗ್ಗೆ ಹೊಸದಾಗಿ ಯೋಚನೆ ಮಾಡಬೇಕೆಂಬ ಈ ಮಾತನ್ನೇ ಒಪ್ಪುವುದಿಲ್ಲ. ಅವರು ಪಶ್ಚಿಮದ ಆಧುನಿಕತಾವಾದಿಗಳಾಗಿದ್ದಾರೆ. ದೇಶವನ್ನು ಯಾವ ರೀತಿ ರೂಪಿಸಬೇಕು ಇದೆಲ್ಲವೂ ಪಶ್ಚಿಮದ ಉದಾಹರಣೆಯಿಂದ ನಿರ್ಣಯವಾಗಿಬಿಟ್ಟಿದೆ:— "ಪಶ್ಚಿಮ ದೇಶಗಳು ಎಲ್ಲಿಗೆ ಹೊರಟಿವೆಯೋ ಅಲ್ಲಿಗೇ ನಾವೂ ಹೋಗಬೇಕು ಮತ್ತು ಅದೇ ರಸ್ತೆಯಲ್ಲಿ ಮುನ್ನಡೆಯಬೇಕು." ವಿಭಿನ್ನ ನಾಯಕರಲ್ಲಿ ಇರುವ ಅಂತರವೇನೆಂದರೆ ಅವರಲ್ಲಿ ಕೆಲವರು ಪಶ್ಚಿಮದ ಅನುಕರಣೆಯನ್ನು ವೇಗವಾಗಿ ಮಾಡಬೇಕೆಂದು ಹೇಳಿದರೆ, ಇನ್ನು ಕೆಲವರು ನಿಧಾನವಾಗಿ ಆಗಬೇಕೆಂದು ಹೇಳುತ್ತಾರೆ. ಇದು ಎಲ್ಲಿಯವರೆಗೆ ಹೋಗಿದೆಯೆಂದರೆ, ತಮ್ಮನ್ನು ಸರ್ವೋದಯಿ ವಿಚಾರದವರೆಂದು ತಿಳಿದುಕೊಂಡಿರುವಂಥವರೂ ಕೂಡ ಪಶ್ಚಿಮದ ಆಧುನಿಕತೆಗೆ ಸ್ವಲ್ಪ ದೇಶಿ ಪುಟವನ್ನು ಕೊಟ್ಟು ಅದನ್ನು ತಮ್ಮದನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಇವರೆಲ್ಲರ ದಿಕ್ಕು ಒಂದೇ ಆಗಿದೆ. ಆದ್ದರಿಂದ ಪಶ್ಚಿಮದಿಂದ ಪ್ರಭಾವಿತರಾದ ರೈತ ನಾಯಕರು ಹೊಸ ದಿಕ್ಕನ್ನು ಶೋಧಿಸುವ ಮಾತನ್ನೇ ಆಡುವುದಿಲ್ಲ. ಅವರು ಕೇವಲ ಹಣಕಾಸಿನ ವಿಷಯಗಳನ್ನು ಎತ್ತುತ್ತಾರೆ. ಅವರ ಪ್ರಕಾರ ಬೆಳೆಗಳಿಗೆ ಒಳ್ಳೆಯ ಬೆಲೆಯನ್ನು ಪಡೆಯುವುದು ಮತ್ತು ಸಾಲವನ್ನು ಮನ್ನಾ ಮಾಡಿಸಿಕೊಳ್ಳುವುದು ಇವಿಷ್ಟೇ ರೈತರ ಸಕ್ರಿಯತೆಯ ಪರಮಾವಧಿಯಾಗಿದೆ.

ಆ ಹಣಕಾಸಿನ ಬೇಡಿಕೆಗಳು ಉಚಿತವೇನೋ ಹೌದು. ಆದರೆ ರೈತರನ್ನು ಔದ್ಯೋಗಿಕ ಉಪಕರಣಗಳ ಗ್ರಾಹಕರನ್ನಾಗಿ ಮಾಡಿ ಅವರ ಮೇಲೆ ಕೋಟ್ಯಾಂತರ ರೂಪಾಯಿಗಳ ಸಾಲವನ್ನು ಹೊರಿಸಲಾಗುತ್ತಿದೆ. ಆಗ ರೈತ ಪುನಃ ಸಾಲವನ್ನು ಪಡೆದು ಹಿಂದಿನ ಸಾಲದ ಕಂತುಗಳನ್ನು ತುಂಬುವ ಪರಂಪರೆಯನ್ನು ಮುಂದವರಿಸಿಕೊಂಡೇನೋ ಹೋಗಬಹುದು. ಆದರೆ ಈ ರೀತಿಯಿಂದ ಅವನು ಎಂದೂ ಋಣಮುಕ್ತನಾಗಲು ಸಾಧ್ಯವಿಲ್ಲ. ಇದರಿಂದ ಮುಕ್ತಿ ಪಡೆಯಲು ರೈತರು ರಾಜನೈತಿಕ ತೀರ್ಮಾನವನ್ನೇ ಕೈಗೊಳ್ಳಬೇಕಾಗುತ್ತದೆ. ರೈತರನ್ನಷ್ಟೇ ಅಲ್ಲ,

ನಮ್ಮ ಈ ದೇಶವನ್ನೇ ವಿದೇಶಿ ಭ್ರಮೆಗಳಿಂದ ಮುಕ್ತ ಮಾಡಿದರೆ ಇನ್ನೂ ಹೆಚ್ಚು ಒಳ್ಳೆಯದು. ಈಗ ಅನೇಕ ಜನರು ಈ ವಿದೇಶಿ ಸಾಲ ನಿಜವಾಗಿಯೂ ಮೋಸವೆಂದು ತಿಳಿಯಲು ಪ್ರಾರಂಭಿಸಿದ್ದಾರೆ. ನಮ್ಮ ಹೆಸರಿನಲ್ಲಿರುವ ಸಾಲದಲ್ಲಿ ಬಹು ದೊಡ್ಡ ಪಾಲು ವಿದೇಶಿ ವಿಶೇಷಜ್ಞರ ಸೇವೆಗಳ ಬೆಲೆಯನ್ನು ತೀರಿಸುವುದಕ್ಕಾಗಿಯೇ ಇದೆ, ಇನ್ನು ಉಳಿದದ್ದು ಅಲ್ಲಿಯ ಯಂತ್ರಗಳನ್ನು ಖರೀದಿಸುವುದಕ್ಕಾಗಿ ಖರ್ಚಾಗಿದೆ.

ಆದ್ದರಿಂದ ನಾವು ನಮ್ಮದೇ ಆದ ರೀತಿಯಲ್ಲಿ ಆಲೋಚಿಸಬೇಕು. ಆಲೋಚಿಸುವುದಕ್ಕಾಗಿ ಬಹಳಷ್ಟು ಸಾಮಗ್ರಿಯಿದೆ. ನೀರಿನ ವಿಷಯವನ್ನೇ ತೆಗೆದುಕೊಳ್ಳಿ, ದಿಲ್ಲಿಯಲ್ಲಿರುವ ದೊಡ್ಡ-ದೊಡ್ಡ ಬಂಗ್ಲೆಗಳ ಮುಂದೆ ವಿಶಾಲವಾದ ಲಾನ್‌ಗಳೇನಿವೆ, ಅಲ್ಲಲ್ಲಿ ಪಾರ್ಕ್‌ಗಳೇನಿವೆ ಅವೆಲ್ಲವುಗಳನ್ನು ಒಳ್ಳೆಯ ರೀತಿಯಲ್ಲಿಡಲು ನೀರು ಖರ್ಚು ಮಾಡಬಹುದೆ? ನಮ್ಮ ಬಳಿ ಇಷ್ಟು ನೀರು ಎಲ್ಲಿದೆ? ನೀರು ಇಲ್ಲದಿದ್ದರೆ ನಗರಗಳ ಪರಿಸ್ಥಿತಿ ಏನಾಗುವುದು? ಇದೆಲ್ಲವನ್ನು ರೈತರು ಮತ್ತು ದೇಶದ ಸಾಮಾನ್ಯ ಜನರೇ ಆಲೋಚಿಸಬೇಕು.

ಇದೇ ರೀತಿ ಸೌದೆಯ ವಿಚಾರ. ಮನೆ ಕಟ್ಟುವುದಕ್ಕಾಗಿ ಮತ್ತು ಉರುವಲಿಗಾಗಿ ಸಾಮಾನ್ಯ ಜನತೆಗೆ ಸೌದೆ ಸಿಗುತ್ತಿಲ್ಲ. ಔದ್ಯೋಗಿಕ ಅಭಿವೃದ್ಧಿಯ ಹೆಸರಿನಲ್ಲಿ ನಾವು ದಯಾಹೀನರಾಗಿ ಕಾಡುಗಳನ್ನು ಕಡಿದಿದ್ದೇವೆ. ಅಳಿದುಳಿದಿರುವ ಕಟ್ಟಿಗೆಯನ್ನೂ ಉದ್ಯೋಗಗಳಿಗಾಗಿಯೇ ಉಪಯೋಗಿಸಿಕೊಳ್ಳುತ್ತಿದ್ದೇವೆ. ಮಹಾರಾಷ್ಟ್ರದಲ್ಲಿ ಸರಕಾರ ಮತ್ತು ಕಾರ್ಖಾನೆಯವರಲ್ಲಿ ಒಪ್ಪಂದವಾಗಿದೆ. ಅದರ ಪ್ರಕಾರ ಕಾಗದ ತಯಾರಿಸಲು ಕಾರ್ಖಾನೆಯವರಿಗೆ ಬಿದಿರನ್ನು ೨೦ ರಿಂದ ೨೫ ಪೈಸೆ ಅಥವಾ ಇನ್ನೂ ಕಡಿಮೆ ಬೆಲೆಗೆ ಕೊಡಲಾಗುತ್ತದೆ ಆದರೆ ಅದೇ ಬಿದಿರನ್ನು ಮನೆ ಕಟ್ಟುವುದಕ್ಕಾಗಿ ಒಬ್ಬ ಬಡವ ಖರೀದಿಸುವುದಾದರೆ ಅದರ ಬೆಲೆ ಪೇಟೆಯಲ್ಲಿ ೧೫ ರಿಂದ ೨೦ ರೂಪಾಯಿಗಳಿಗೆ ಕಡಿಮೆ ಇರುವುದಿಲ್ಲ. ಕಾಗದ ತಯಾರಿಸಲು ಇಷ್ಟೊಂದು ಬಿದಿರನ್ನು ಹಾಳು ಮಾಡದಿದ್ದರೆ ಜನರು ತಮಗಾಗಿ ಸುಮಾರು ಗಟ್ಟಿಯಾದ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದರು. ಆಧುನಿಕ ಕಾಲದಲ್ಲಿ ಕಾಗದದ ಬಳಕೆಯಿಲ್ಲದೆ ಕೆಲಸ ನಡೆಯುವುದಿಲ್ಲವೆಂಬುದೇನೋ ನಿಜ. ಆದರೆ ಈಗ ಬಳಕೆಯಾಗುತ್ತಿರುವ ಕಾಗದದ ಪ್ರಮಾಣದ ಹತ್ತನೇ ಒಂದು ಭಾಗದಷ್ಟು ಪ್ರಮಾಣದಿಂದ ಕೆಲಸ ನಡೆಯಲು ಸಾಧ್ಯವಿದೆ.

ಕಲ್ಲಿದ್ದಲಿನ ಬಗ್ಗೆಯೂ ಔದ್ಯೋಗಿಕ ಉಪಯೋಗ ಮತ್ತು ಗೃಹೋಪಯೋಗ ಇವುಗಳ ಮಧ್ಯ ಸಂತುಲನವನ್ನು ಕುರಿತು ಆಲೋಚಿಸಬೇಕಾಗಿದೆ. ಇಂದು ವಿದ್ಯುತ್ ಉತ್ಪಾದಿಸಲು ಸ್ಥಾವರಗಳಿಗೆ ಯಾವ ಬೆಲೆಯಲ್ಲಿ ಕಲ್ಲಿದ್ದಲನ್ನು

ಕೊಡಲಾಗುತ್ತದೋ ಆದರ ಮೂರು – ನಾಲ್ಕು ಪಟ್ಟು ಹೆಚ್ಚಿನ ದರದಲ್ಲಿ ಬಡವರ ಭಟ್ಟಿಯು ಕೆಲಸಕ್ಕೆ ಕೊಡಲಾಗುತ್ತದೆ. ಒಂದು ಕಿಲೋಗ್ರಾಂ ಕಲ್ಲಿದ್ದಲು ಉರಿಸಿ ತಯಾರಿಸಲಾಗುವ ಒಂದು ಯುನಿಟ್ ವಿದ್ಯುತ್‌ಶಕ್ತಿಯು ಒಂದು ಕಿಲೋ ಗ್ರಾಂ ಕಲ್ಲಿದ್ದಲಿನ ಬೆಲೆಯ ಅರ್ಧದಷ್ಟು ಬೆಲೆಯಲ್ಲಿ ದೊರೆಯುತ್ತದೆ. ಕಲ್ಲಿದ್ದ ಲಿನ ಉಪಯೋಗ ವಿದ್ಯುತ್‌ಶಕ್ತಿಯನ್ನು ಉತ್ಪಾದಿಸುವುದಕ್ಕಾಗಿಯೇ ಇದೆ ಯೆಂದೂ, ಅದನ್ನು ಸಾಮಾನ್ಯ ಜನತೆ ಉರುವಲಿಗಾಗಿ ಉಪಯೋಗಿಸಿಕೊಳ್ಳು ವುದಕ್ಕೆ ಅಧಿಕಾರವನ್ನು ಹೊಂದಿಲ್ಲವೆಂದೂ ಈ ದೇಶವನ್ನು ಆಳುವವರು ತೀರ್ಮಾನ ಮಾಡಿದಂತಿದೆ. ವಿದ್ಯುತ್ತನ್ನು ತಯಾರಿಸುವಾಗ ಇದ್ದಲಿನ ಶೇಕಡಾ ೮೦ ರಷ್ಟು ಇಂಧನ ವ್ಯರ್ಥವಾಗಿ ಹೋಗುತ್ತದೆಂಬ ಸಂಗತಿ ಇದ್ದೇ ಇದೆ. ರೈತರು ಯೋಚನೆ ಮಾಡಬೇಕು: "ವಿದ್ಯುತ್ತನ್ನು ಉತ್ಪಾದಿಸವುದು ಹೆಚ್ಚು ಅಗತ್ಯವೋ, ಅಥವಾ ಅಡಿಗೆ ಮಾಡುವುದಕ್ಕೆ ಉರುವಲು ಪಡೆಯುವುದು ಹೆಚ್ಚು ಅಗತ್ಯವೋ?"

ಔದ್ಯೋಗೀಕರಣದ ಹೆಸರಿನಲ್ಲಿ ನಾವು ಒಂದು ಕಡೆ ಜನಸಾಮಾನ್ಯರಿಂದ ಸಾಧನ ಗಳನ್ನು ಕಿತ್ತುಕೊಳ್ಳುತ್ತಿದ್ದೇವೆ, ಇನ್ನೊಂದು ಕಡೆ ವಿದೇಶಗಳಿಂದ ಆಮದಾದ ಕೀಳುಮಟ್ಟದ ಪದಾರ್ಥಗಳಿಂದ ಮಾರುಕಟ್ಟೆಯನ್ನು ತುಂಬುತ್ತಿದ್ದೇವೆ. ವಿದೇಶಗ ಳಿಂದ ನಾವು ತಂದಿರುವ ಆಹಾರದ ಬೀಜಗಳು ಪೂರ್ಣವಾಗಿ ಕೀಳಾಗಿವೆ. ಈ ಬೀಜಗಳಿಂದ ಬೆಳೆ ಹುಲುಸಾಗಿ ಬರುತ್ತದೆ. ಆದರೆ ಅದರಿಂದ ಬರುವ ಕಾಳನ್ನು ಯಾವುದೇ ಶ್ರೀಮಂತ ವಿದೇಶಿ ವ್ಯಕ್ತಿ ತಿನ್ನಲು ಯೋಗ್ಯವೆಂದು ಭಾವಿಸುವುದಿಲ್ಲ.

ನಿಜವಾಗಿಯೂ ಹೇಳುವುದಾದರೆ ಸರ್ಕಾರದ ಅಭಿವೃದ್ಧಿ ತಂತ್ರದ ಜನ ರಲ್ಲಿ ತಮ್ಮ ದೇಶ ಮತ್ತು ತಮ್ಮ ದೇಶವಾಸಿಗಳ ಬಗ್ಗೆ ಎಳ್ಳಷ್ಟೂ ಗೌರವ ಇರುವುದಿಲ್ಲ. ದೇಶವಾಸಿಗಳನ್ನು ಗೌರವಿಸುವುದನ್ನು ರೈತರು ಅವರಿಗೆ ಕಲಿಸ ಬಲ್ಲರು. ಈ ಅಧಿಕಾರಿಗಳು, ರಾಜಕೀಯ ಮುಖಂಡರು, ವಿಜ್ಞಾನಿಗಳು ರೈತರ ಮಕ್ಕಳೇ ಆಗಿದ್ದಾರೆ. ಅವರು ವಿದ್ಯಾಭ್ಯಾಸ ಮಾಡಿರುವುದರಿಂದ ತಮ್ಮನ್ನು ಬೇರೆ ಯಾವುದೋ ಪ್ರಪಂಚದ ಜೀವಿಗಳೆಂದು ತಿಳಿಯುತ್ತಿದ್ದಾರೆ. ಔದ್ಯೋಗಿ ಕರಣದ ಪ್ರಕ್ರಿಯೆಯಲ್ಲಿ ಯದ್ವಾತದ್ವಾ ದೇಶದ ಪ್ರಾಕೃತಿಕ ಸಾಧನಗಳನ್ನು ಹಾಳುಮಾಡುವುದಕ್ಕೂ ಮತ್ತು ದೇಶವಾಸಿಗಳಿಗೆ ಕೀಳಾದ ಮತ್ತು ಅಗ್ಗದ ಪದಾರ್ಥಗಳನ್ನು ಉಪಯೋಗಿಸಲು ಕೊಡುವುದಕ್ಕೂ ಸರಕಾರಿಆಡಳಿತದಬಳಿ ಒಂದು ನೆಪ ಇದೆ. ಅದರ ಪ್ರಕಾರ ಇಂದಿನ ಯುಗದಲ್ಲಿ ಜೀವಿಸಬೇಕಾದರೆ ವಿದೇಶ ಗಳಲ್ಲಿ ತಯಾರಾಗುವ ಆಧುನಿಕ ಉಪಕರಣಗಳನ್ನು ಮತ್ತು ಅಲ್ಲಿಯ ಆಧುನಿಕತೆಯ ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳುವುದು ಅಗತ್ಯವಾಗಿದೆ.

ಅವುಗಳನ್ನು ಖರೀದಿಸುವುದಕ್ಕಾಗಿ ಇಲ್ಲಿಯು ಸಾಧನಗಳನ್ನು ಮಾರುವುದು ಅವಶ್ಯಕ." ಆದರೆ ಈ ಪದಾರ್ಥಗಳು ಅಗತ್ಯವಿರುವುದಾದರೆ ನಾವು ಅವುಗಳನ್ನು ಇಲ್ಲಿಯೇ ಏಕೇ ತಯಾರಿಸಿಕೊಳ್ಳುತ್ತಿಲ್ಲ ?

ಇಂದು ದೇಶದಲ್ಲಿ ಈ ಉಪಕರಣಗಳು ಬೇಕೆ ಅಥವಾ ಬೇಡವೆ ಎಂಬ ಬಗ್ಗೆ ವಿವಾದವಿಲ್ಲ. ನಮಗೆ ಪಾಶ್ಚಾತ್ಯ ದೇಶಗಳಲ್ಲಿಯಂಥ ಉಪಕರಣಗಳು, ಆಧುನಿಕ ತಂತ್ರಜ್ಞಾನಗಳು ಮತ್ತು ಉಪಗ್ರಹದ ತಂತ್ರಜ್ಞಾನಗಳು ಕೂಡಾ ಅತ್ಯಂತ ಅವಶ್ಯವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ದೇಶದ ರಕ್ಷಣೆಗಾಗಿ ಶಾಂತಿಸೇನೆಯನ್ನು ಕಟ್ಟಬೇಕೆಂಬ ಮಾತನ್ನು ಇಂದು ಯಾರೂ ಆಡುವುದಿಲ್ಲ. ಈ ಪದಾರ್ಥಗಳ ಅವಶ್ಯಕತೆ ಇದೆಯೆಂದು ಒಪ್ಪಿಕೊಂಡ ಮೇಲೆ ಅವುಗಳನ್ನು ಇಲ್ಲಿಯೇ ಸ್ವತಃ ತಯಾರಿಸುವ ಸಾಹಸವನ್ನೇಕೆ ಮಾಡುವುದಿಲ್ಲ?

ಈ ತರಹದ ಯಂತ್ರ ಸಾಮಗ್ರಿಗಳನ್ನು ಸ್ವತಃ ತಯಾರಿಸದೆ ವಿದೇಶದಿಂದ ತಯಾರಿಸುವುದಕ್ಕಾಗಿ ಅವರು ಕೊಡುವ ತರ್ಕ ಏನೆಂದರೆ ನಮ್ಮ ಬಳಿ ಇಂಥ ಕಾರ್ಖಾನೆಗಳನ್ನು ಪ್ರಾರಂಭಿಸಲು ಬಂಡವಾಳವಿಲ್ಲ. ಈ ತರ್ಕದ ಆಧಾರದ ಮೇಲೆಯೇ ನಾವು ಸ್ವೀಡನ್‌ನಿಂದ ತೋಪುಗಳನ್ನು ಖರೀದಿಸುತ್ತೇವೆ, ಜರ್ಮನಿಯಿಂದ ಜಲಾಂತರ್ಗಾಮಿಗಳನ್ನು ಖರೀದಿಸುತ್ತೇವೆ ಮತ್ತು ಇಂಗ್ಲೆಂಡಿನಿಂದ ಹಳೆಯ ಅನುಪಯುಕ್ತ ವಿಮಾನಗಳನ್ನು ಖರೀದಿಸುತ್ತೇವೆ. ಆದರೆ ಈ ರೀತಿಯಲ್ಲಿ ಪಶ್ಚಿಮದ ಅನುಕರಣೆ ಸಾಧ್ಯವಿಲ್ಲ. ಸ್ವತಃ ಪದಾರ್ಥಗಳನ್ನು ಮಾಡುವ ಬದಲು ವಿದೇಶಗಳಿಂದ ಖರೀದಿಸಬೇಕೆಂಬ ವಿಚಾರದ ಪರವಾಗಿ ಬಂಡವಾಳದ ಕೊರತೆಯ ತರ್ಕದ ಮಾತು ವಿಚಿತ್ರವಾಗಿದೆ. ಪಶ್ಚಿಮದ ದೇಶಗಳಿಗೆ ಈ ಎಲ್ಲಾ ಪದಾರ್ಥಗಳನ್ನು ತಯಾರಿಸಲು ಹಣ ಎಲ್ಲಿಂದ ಬಂದಿತ್ತು? ಯಾವ ಪಶ್ಚಿಮ ದೇಶಗಳ ಮಾತನ್ನು ನಾವು ಈಗ ಆಡುತ್ತಿದ್ದೇವೆಯೋ ಅದು ನೂರು ವರ್ಷಗಳಿಗಿಂತ ಹೆಚ್ಚು ಹಳೆಯದಲ್ಲ. ನೂರು ನೂರೈವತ್ತು ವರ್ಷಗಳ ಮುಂಚೆ ಅಲ್ಲಿ ವಿದ್ಯುತ್, ರೈಲು, ಮೋಟಾರು, ವಿಮಾನ ಮುಂತಾದವುಗಳು ಯಾವುದೂ ಇರಲಿಲ್ಲ; ಈ ಎಲ್ಲ ಪದಾರ್ಥಗಳ ಸಂಶೋಧನೆಯೇ ಸುಮಾರು ೧೦೦ ವರ್ಷಗಳ ಹಿಂದೆ ಆಗಿದೆ. ಇನ್ನು ಇವುಗಳ ವ್ಯಾಪಕ ಉಪಯೋಗದ ಮಾತಂತು ಆನಂತರದ್ದು. ಪಶ್ಚಿಮ ದೇಶಗಳಲ್ಲಿ ಇಂದು ಕಂಡುಬರುವ ಸಮೃದ್ಧಿಯು ಬಹುಶಃ ಕಳೆದ ೫೦-೬೦ ವರ್ಷಗಳೊಳಗೆ ಉಂಟಾಗಿರುವಂಥದು. ಪಶ್ಚಿಮ ದೇಶಗಳು ಅನೇಕ ಶತಮಾನಗಳಿಂದ ಶ್ರೀಮಂತವಾಗಿ ಇರಲಿಲ್ಲ. ಹಾಗಾದರೆ ಪಶ್ಚಿಮ ದೇಶಗಳು ತಮ್ಮದೇ ಆದ ಈ ಅಭಿವೃದ್ಧಿಯನ್ನು ಹೇಗೆ ಸಾಧಿಸಿದವು ? ಇದೆಲ್ಲವೂ ಪ್ರಪಂಚದ ತುಂಬೆಲ್ಲ ಮಾಡಲಾದ ಲೂಟಿಯ ಪರಿಣಾಮವೆಂದು ತಿಳಿಯಬಹುದು.

ಪಶ್ಚಿಮ ದೇಶಗಳು ಲೂಟಿ ಮಾಡಿಯೇ ಇದ್ದವು. ಅಲ್ಲಿಯ ಅಭಿವೃದ್ಧಿಯಲ್ಲಿ ಈ ಲೂಟಿಯ ಹಿನ್ನೆಲೆಯೂ ಇದೆ. ಅಲ್ಲಿಯ ಇಡೀ ಅಭಿವೃದ್ಧಿಯು ಲೂಟಿ ಮಾಡಲಾದ ಬಂಡವಾಳವನ್ನೇ ಅವಲಂಬಿಸಿದೆ. ಆದ್ದರಿಂದ, ಇವರೊಂದಿಗೆ ಯಾವುದೇ ಪ್ರಕಾರದ ಸಹೋದರತ್ವದ ಸಂಬಂಧ ಹೊಂದಲು ಸಾಧ್ಯವಿಲ್ಲ. ಇಂಥ ಪರಿಸ್ಥಿತಿಯಲ್ಲಿ ನಾವು ನಮ್ಮ ಪ್ರತ್ಯೇಕ ಮಾರ್ಗದ ಬಗ್ಗೆ ತೀವ್ರವಾಗಿ ಯೋಚಿಸಬೇಕಿದೆ.

"ಕಡಿಮೆ ಬಂಡವಾಳ" ಎಂಬ ಮಾತು ಬಂಡವಾಳದ ನಿಜ ಅರ್ಥವನ್ನು ತಿಳಿಯದೆ ಇರುವ ಕಾರಣದಿಂದ ಬಂದಿದೆ. ಬಂಡವಾಳವೆಂಬುದು ಅರ್ಥಶಾಸ್ತ್ರದ ಕಲ್ಪನೆ ಮಾತ್ರ. ವಾಸ್ತವವಾಗಿ ಬಂಡವಾಳವೆಂಬುದು ಪ್ರಾಕೃತಿಕ ಸಾಧನ ಮತ್ತು ಜನರ ಶ್ರಮವೇ ಆಗಿರುತ್ತದೆ. ಇವುಗಳ ಉಪಯೋಗದ ಸಂಕಲ್ಪವಿದ್ದಲ್ಲಿ ರೂಪಾಯಿ ಪೈಸೆಗಳ ಎಣಿಕೆಯ ಅವಶ್ಯಕತೆ ಇರುವುದಿಲ್ಲ. ಆದರೆ ನಮ್ಮ ಸಾಧನಗಳನ್ನು ನಮಗನುಗುಣವಾಗಿ ಉಪಯೋಗಿಸುವುದನ್ನು ಬಿಟ್ಟು ಎಲ್ಲವನ್ನೂ ಹೊರಗಡೆಯಿಂದಲೇ ಖರೀದಿಸಬೇಕೆಂದರೆ ಬಂಡವಾಳದ ಕಲ್ಪನೆಯೊಂದೇ ವಾಸ್ತವಿಕವಾಗುತ್ತದೆ. ಪ್ರತಿಯೊಂದು ಪದಾರ್ಥದ ಬೆಲೆಯನ್ನು ರೂಪಾಯಿ-ಪೈಸೆಗಳಲ್ಲಿ ಕಟ್ಟಲಾಗುತ್ತಿದೆ. ನಮ್ಮ ಸಾಧನಗಳು ಮತ್ತು ಕೆಲಸಗಳು ನಮಗಾಗಿಯೇ ಇದ್ದಾಗ ಮಾರುಕಟ್ಟೆಯಲ್ಲಿ ಅವುಗಳ ಬೆಲೆ ಎಷ್ಟು ಎಂಬ ಮಾತಿಗೆ ಯಾವ ಮಹತ್ವವೂ ಇರುವುದಿಲ್ಲ.

ಅಭಿವೃದ್ಧಿಗಾಗಿ ಬಂಡವಾಳವೊಂದೇ ಎಲ್ಲಕ್ಕಿಂತ ಹೆಚ್ಚು ಅಗತ್ಯವಾಗಿರುವುದಿಲ್ಲ. ನಿಜವಾದ ಅಗತ್ಯವೇನೆಂದರೆ ಏನನ್ನಾದರೂ ಮಾಡಿ ತೋರಿಸಬೇಕೆಂಬ ಸಂಕಲ್ಪ. ಅದರೊಂದಿಗೆ ಶ್ರಮ, ಬುದ್ಧಿ ಮತ್ತು ತಪಸ್ಸು. ೧೯ನೇ ಶತಮಾನದ ಕೊನೆಯಲ್ಲಿ ಜಪಾನನ್ನು ಪಶ್ಚಿಮದ ದೇಶಗಳಿಗೆ ಸರಿಸಮಾನ ಮಾಡುವ ರೀತಿಗಳ ಬಗ್ಗೆ ಯೋಚನೆ ಮಾಡುವಾಗ ಅಲ್ಲಿಯ ಯೋಜನೆ ರೂಪಿಸುವವರು ಈ ಮಾತುಗಳ ಬಗ್ಗೆ ಬಹಳ ಸ್ಪಷ್ಟ ವ್ಯಾಖ್ಯೆಯನ್ನು ಮಾಡಿದ್ದರು. ಅವರ ಅಭಿಪ್ರಾಯದ ಪ್ರಕಾರ ಈ ಕೆಲಸಕ್ಕಾಗಿ ಹತ್ತು ಅಂಶಗಳು ಬೇಕಾಗಿದ್ದರೆ ಅವುಗಳಲ್ಲಿ ೫ ಅಂಶಗಳು ನಿಮ್ಮ ಕಲ್ಪನೆ ಮತ್ತು ಸಂಕಲ್ಪ; ೪ ಅಂಶಗಳು ಇವುಗಳನ್ನು ಸಾಕಾರಗೊಳಿಸುವುದಕ್ಕಾಗಿ ಅಗತ್ಯವಾದ ವ್ಯವಸ್ಥೆ ಮತ್ತು ಅದಕ್ಕೆ ತಕ್ಕ ಶಾಸನ ಮಾಡುವ ಬುದ್ಧಿ ಮತ್ತು ೧ ಅಂಶ ಮಾತ್ರ ಬಂಡವಾಳ ಮತ್ತು ಸಾಧನ.

ಈ ವಿಚಾರಗಳ ಆಧಾರದ ಮೇಲೆಯೇ ಜಪಾನಿನಲ್ಲಿ ೧೮೮೪ರಲ್ಲಿ ದಶ

ವಾರ್ಷಿಕ ಯೋಜನೆಯೊಂದನ್ನು ತಯಾರಿಸಲಾಗಿತ್ತು. ಆ ಯೋಜನೆ ಇಷ್ಟೊಂದು ವಿಸ್ತೃತವಾಗಿತ್ತಲ್ಲ, ಅದನ್ನು ೩೦ ಸಂಪುಟಗಳಲ್ಲಿ ಬರೆಯಬೇಕಾಯಿತು. ಆ ಯೋಜನೆಯನ್ನು ಇಡೀ ಜಪಾನಿನಲ್ಲಿ ಎಲ್ಲಾ ಮಹತ್ವಪೂರ್ಣ ಜನರು ವರೆಗೆ ತಲುಪಿಸಲಾಗಿತ್ತು. ನಂತರ ತಮ್ಮ ಸಾಧನಗಳು ಮತ್ತು ತಮ್ಮ ಸಾಹಸದ ಬಲದಿಂದ ಕೆಲವೇ ದಶಕಗಳಲ್ಲಿ ಜಪಾನನ್ನು ಅಮೇರಿಕಾ ಮತ್ತು ಯುರೋಪ್‌ನೊಂದಿಗೆ ಸರಿಸಾಟಿಯಾಗುವಂತೆ ಸಮರ್ಥವನ್ನಾಗಿ ಮಾಡಿದರು. ಈ ಕೆಲಸದಲ್ಲಿ ಅವರು ವಿದೇಶಗಳಿಂದ ಸ್ವಲ್ಪ ಕಲಿಯುವ ಅಗತ್ಯವಿತ್ತು. ಯೋಜನೆಯ ಅನುಸಾರವಾಗಿ ವಿದೇಶಿಯರನ್ನು ಮೂರು ಅಥವಾ ನಾಲ್ಕು ವರ್ಷದ ವರೆಟ್ಟಿಗೆ ಕರೆಯಲಾಗುತ್ತಿತ್ತು ಮತ್ತು ಅನಂತರ ಅವರನ್ನು ಹಿಂದಕ್ಕೆ ಕಳು ಹಿಸಲಾಗುತ್ತಿತ್ತು. ವಿದೇಶದಿಂದ ಬಂದ ಜನರು ಸಹಾ ಜಪಾನಿನ ಯೋಜನೆಯ ಅನುಸಾರವಾಗಿಯೇ ಕೆಲಸ ಮಾಡುತ್ತಿದ್ದರು. ವಿದೇಶದ ವಿಚಾರ ಮತ್ತು ತಂತ್ರಜ್ಞಾನವನ್ನು ಜಪಾನಿ ಯೋಜನೆಯಲ್ಲಿ ಎಲ್ಲಿ ಸೂಕ್ತವಾಗುತ್ತಿತ್ತೊ ಅಲ್ಲಿ ಅವುಗಳನ್ನು ಅಳವಡಿಸಿಕೊಳ್ಳಲಾಗುತ್ತಿತು. ಜಪಾನ್ ದೇಶವು ವಿಶ್ವದ ತಂತ್ರ ಜ್ಞಾನವನ್ನು ತನ್ನ ರೀತಿಯಲ್ಲಿ ಅಳವಡಿಸಿಕೊಳ್ಳುತ್ತಿತ್ತೇ ಹೊರತು ವಿಶ್ವದ ಅಪೇಕ್ಷೆಯಂತೆ ಅಳವಡಿಸಿಕೊಳ್ಳುತ್ತಿರಲಿಲ್ಲ.

ನಾವು ಕೂಡ ನಮ್ಮೀ ದೇಶವನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕಾ ಗಿದೆಯೋ ಅದಕ್ಕೆ ತಕ್ಕ ಯೋಜನೆಯನ್ನು ತಯಾರಿಸಬೇಕು ಮತ್ತು ಅದಕ್ಕನು ಗುಣವಾಗಿ ನಮ್ಮ ಸಾಧನಗಳನ್ನು ಮತ್ತು ಶ್ರಮವನ್ನು ಉಪಯೋಗಿಸಿಕೊಳ್ಳ ಬೇಕು. ವಿದೇಶದ ತಂತ್ರಜ್ಞಾನವನ್ನು ನಮ್ಮ ಯೋಜನೆಗೆ ಅನುಗುಣವಾಗಿ ಅಳವಡಿಸಿಕೊಳ್ಳುವ ಕುಶಲತೆ ಇರಬೇಕು. ಅದಕ್ಕಾಗಿ ನಾವು ಪುನಃ ಇನ್ನೊಂದು ಬಾರಿ ಸ್ವದೇಶಿ ಆಂದೋಲನವನ್ನು ನಡೆಸಬೇಕು. ಶಿಕ್ಷಣ, ರಾಜಕಾರಣ, ವ್ಯವಸಾಯ, ಉದ್ಯೋಗ ಮುಂತಾದವುಗಳ ಬಗ್ಗೆ ನಮ್ಮದೇ ಆದ ರೀತಿಯಲ್ಲಿ ಯೋಚಿಸಲು ಪ್ರಾರಂಭಿಸಬೇಕು. ಕೆಲವೊಂದು ಸಲ ಕೆಲವು ಪದಾರ್ಥಗಳನ್ನು ಮತ್ತು ವಿಚಾರಗಳನ್ನು ಹೊರಗಿನಿಂದ ತೆಗೆದುಕೊಳ್ಳಬೇಕಾಗಬಹುದು. ಆದರೆ ಪ್ರತಿಯೊಂದು ಕ್ಷೇತ್ರದಲ್ಲಿ ಮುಖ್ಯ ಚೇತನ ದೇಶಿಯವೇ ಆಗಿರಬೇಕು. ಆಗ ಉಳಿದ ವಿಷಯಗಳಲ್ಲಿ ವಿದೇಶಗಳಿಂದ ಏನನ್ನೂ ತೆಗೆದುಕೊಳ್ಳಬೇಕಾಗಿಲ್ಲ. ಉದಾ: ನಾವು ನೀರಾವರಿಯ ತಂತ್ರಜ್ಞಾನವನ್ನು ವಿಕಾಸಗೊಳಿಸಿಕೊಳ್ಳುತ್ತಾ ಬಂದಿದ್ದೇವೆ. ಯುರೋಪ್ ಮತ್ತು ಅಮೇರಿಕೆಯಲ್ಲಿ ನೀರಾವರಿಯೇ ಇರುತ್ತಿರ ಲಿಲ್ಲ. ಅಂದಮೇಲೆ ಈ ವಿಷಯದಲ್ಲಿ ಅವರು ನಮಗೆ ಏನನ್ನು ಕಲಿಸ

೩೨ನೇ ಪುಟ ನೋಡಿ

ವಿಶ್ವವಾಣಿಜ್ಯ ಸಂಸ್ಥೆ, ಉದ್ಯೋಗ ಮತ್ತು ಬಡತನ

– ಎಂ. ಎಸ್. ಸ್ವಾಮಿನಾಥನ್

೨೦೦೦ ನೇ ಇಸ್ವಿಯು ಎರಡು ಅಂತರರಾಷ್ಟ್ರೀಯ ಘಟನೆಗಳ ಐದನೇ ವರ್ಷವಾಗಿದೆ. ಒಂದು, ಕೊಪೆನಹ್ಯಾಗೆನ್‌ನಲ್ಲಿ ನಡೆದ "ಸಾಮಾಜಿಕ ಶೃಂಗಸಭೆ"; ಇನ್ನೊಂದು, ಬೈಜಿಂಗ್‌ನಲ್ಲಿ ನಡೆದ "ಮಹಿಳೆಯರನ್ನು ಕುರಿತ ವಿಶ್ವ ಸಮ್ಮೇಳನ". ಬಡತನ ನಿರ್ಮೂಲನದ ವಿಷಯದಲ್ಲಿ ಇಂದಿನಂತೆಯೇ ನಿಷ್ಕ್ರಿಯತೆಯು ಮುಂದುವರೆದರೆ ಸಾಮಾಜಿಕ ವಿಚ್ಛೇದನಗಳುಂಟಾಗುವವು ಎಂದು ಕೊಪೆನ್‌ಹ್ಯಾಗೆನ್ ಶೃಂಗಸಭೆ ಎಚ್ಚರಿಕೆಯನ್ನು ಕೊಟ್ಟಿತು; ಬೈಜಿಂಗ್ ಸಮ್ಮೇಳನವು ಮಹಿಳೆಯರಿಗೂ ಮತ್ತು ಬಡತನಕ್ಕೂ ಇರುವ ಸಂಬಂಧವನ್ನು ಮುರಿಯಬೇಕೆಂದು ಒತ್ತಾಯಿಸಿತು. ಆದರೆ ದುರ್ದೈವದಿಂದ ಕಳೆದ ಐದು ವರ್ಷಗಳಲ್ಲಿ ಕೊಪೆನ್ ಹ್ಯಾಗೆನ್ ಮತ್ತು ಬೈಜಿಂಗಳಲ್ಲಿ ಗುರುತಿಸಲಾದ ಗುರಿಗಳನ್ನು ಮುಟ್ಟುವುದರಲ್ಲಿ ಪ್ರಗತಿಯೇ ಆಗಿಲ್ಲ. ಈಗ ಜಾರಿಗೆ ಬಂದಿರುವ ವಾಣಿಜ್ಯ ಸ್ವರೂಪಗಳು ಶ್ರೀಮಂತ-ಬಡವರ ಮಧ್ಯದ ಅಂತರವನ್ನೂ ಹಾಗೂ ಸ್ತ್ರೀ – ಪುರುಷರ ಮಧ್ಯದಲ್ಲಿ ಇರುವ ಅಸಮಾನತೆಯನ್ನೂ ಹೆಚ್ಚಿಸುವವೆಂಬುದು ಕಾಲಕಳೆದಂತೆ ಸ್ಪಷ್ಟವಾಗುತ್ತಿದೆ.

ವಿಶ್ವ ವಾಣಿಜ್ಯ ಸಂಸ್ಥೆಯ ಮುಖ್ಯ ತೀರ್ಪೇನೆಂದರೆ ಮುಕ್ತ, ಸಮಾನ ಮತ್ತು ಅ-ತಾರತಮ್ಯದ ಬಹುಹಂತದ ವಾಣಿಜ್ಯ ಪದ್ಧತಿಯನ್ನು ಪ್ರೋತ್ಸಾಹಿಸುವುದೇ ಆಗಿದೆ. ರಿಕಾರ್ಡೋರವರ "ಹೋಲಿಕೆ ಆಧಾರಿತ ಅನಕೂಲಗಳು" ಎಂಬ ತತ್ವವೇ ವಿಶ್ವ ವಾಣಿಜ್ಯ ಸಂಸ್ಥೆಯ ಸಮಾನ ಹಂಚಿಕೆಯ ವಾಣಿಜ್ಯ ಕಲ್ಪನೆಗೆ ಮಾರ್ಗದರ್ಶಕವಾಗಿದೆ. ಸ್ಪರ್ಧೆಯಲ್ಲೂ ದಕ್ಷತೆ ಇರಬೇಕು ಮತ್ತು ಉಳಿತಾಯವಿರಬೇಕು ಎಂಬ ವಿಚಾರಕ್ಕೆ ವಿ.ವಾ.ಸಂ. ಒತ್ತುಕೊಡುತ್ತದೆ. ವಾಣಿಜ್ಯಕ್ಕೆ ಸಂಬಂಧವಿರುವಷ್ಟರಮಟ್ಟಿಗೆ ಪರಿಸರದ ಬಗ್ಗೆಯೂ ಅದು ತನ್ನ ಕಾಳಜಿ ವ್ಯಕ್ತಪಡಿಸುತ್ತದೆ. ಉದಾಹರಣೆಗೆ: ಜೀವಕೋಶಗಳ ಮಾರ್ಪಾಡಿನಿಂದ ತಯಾರಿಸಿದ ಆಹಾರದ ವಿಷಯ. ಇದು ವಿ.ವಾ.ಸಂ.ದ "ವಾಣಿಜ್ಯ ವ್ಯವಹಾರಕ್ಕೆ ತಾಂತ್ರಿಕತಡೆಗಳ ಸಮಿತಿ"ಯ ಮುಂದೆ ವಿಚಾರಕ್ಕಾಗಿ ಇದೆ. ಇನ್ನು ಬಡತನ ನಿರ್ಮೂಲನೆ ಕುರಿತು. ಈ ಬಗ್ಗೆ ಇಂದು ಪ್ರಚಲಿತವಿರುವ ಆಹ್ವಾನಗಳ ಬಗ್ಗೆ ಮುಖ್ಯವಾಗಿ, "ವ್ಯಾಪಾರ ಮಾಡಿರಿ; ಆದರೆ ಸಹಾಯವಿಲ್ಲ" ಎಂಬ, ಶ್ರಿಮಂತ ರಾಷ್ಟ್ರಗಳ ಧೋರಣೆಯನ್ನು ಕುರಿತು ತುರ್ತಾಗಿ ಎಲ್ಲ ದೇಶಗಳು ಗಮನಕೊಡಬೇಕಾಗಿದೆ.

ಪ್ರತಿಯೊಬ್ಬ ವ್ಯಕ್ತಿಯೂ ಪ್ರತಿದಿನ ಒಂದು ಡಾಲರ್ ಆದಾಯ ಹೊಂದಿರಬೇಕೆಂಬ ವಿಶ್ವಬ್ಯಾಂಕಿನ ಅಳತೆಗೋಲಿನ ಪ್ರಕಾರ ಏಶಿಯಾ ಖಂಡದಲ್ಲಿರುವ ವ್ಯಕ್ತಿಗಳಲ್ಲಿ ಪ್ರತಿ ಮೂರನೇ ವ್ಯಕ್ತಿ ಬಡವನಾಗಿದ್ದಾನೆ. ಇದು ಏಶಿಯಾ ಅಭಿವೃದ್ಧಿ ಬ್ಯಾಂಕಿನ ಸರ್ವೇಕ್ಷಣದ ಪ್ರಕಾರ ಇರುವ ಸಂಗತಿ. ದಕ್ಷಿಣ ಏಶಿಯಾ ಇಡೀ ವಿಶ್ವದಲ್ಲಿಯೇ ಅತ್ಯಂತ ಬಡಪ್ರದೇಶವಾಗಿದೆ. ಇಲ್ಲಿ ೬೦ ಕೋಟಿಗೂ ಹೆಚ್ಚು ಜನ ಬಡವರಾಗಿದ್ದಾರೆ ಮತ್ತು ಅವರಲ್ಲಿ ೪೫ ಕೋಟಿ ಜನ ಭಾರತದಲ್ಲಿದ್ದಾರೆ. ಇಲ್ಲಿ ಶ್ರೀಮಂತ-ಬಡವ ಎಂಬ ಭೇದ ಹೆಚ್ಚಾಗುತ್ತಿರುವುದರ ಜೊತೆಗೆ ಗ್ರಾಮೀಣ-ನಗರ ಅಂತರವೂ ಹೆಚ್ಚಾಗುತ್ತಿದೆ. ಇತ್ತೀಚಿಗಿನ ತಮ್ಮ ಬಜೆಟ್ ಭಾಷಣದಲ್ಲಿ ನಮ್ಮ ಕೇಂದ್ರ ಅರ್ಥಮಂತ್ರಿಯವರು ೧ ಲಕ್ಷ ೮ ಸಾವಿರ ಹಳ್ಳಿಗಳಿಗೆ ಪ್ರಾಥಮಿಕ ಶಾಲೆಗಳಿಲ್ಲವೆಂದು ಹೇಳಿದ್ದಾರೆ; ೪ ಲಕ್ಷ ೫ ಸಾವಿರ ಹಳ್ಳಿಗಳಿಗೆ ನೀರಿನ ಮತ್ತು ಚರಂಡಿ ಸಮಸ್ಯೆಗಳಿವೆಯೆಂದು ಹೇಳಿದ್ದಾರೆ ಮತ್ತು ೧೪೦ ಲಕ್ಷ ಗ್ರಾಮೀಣ ಮನೆಗಳ ಕೊರತೆ ಇದೆ ಎಂದು ಹೇಳಿದ್ದಾರೆ.

ಹಸಿವು ಮತ್ತು ಅಪೌಷ್ಟಿಕತೆ ಬಡತನದಿಂದ ಉಂಟಾಗುವ ಗಂಭೀರ ಪರಿಣಾಮಗಳು. ಏಕೆಂದರೆ ಬಡವರು ತಮ್ಮ ಆದಾಯದಲ್ಲಿ ಶೇಕಡಾ ೬೫ನ್ನು ಆಹಾರ ಖರೀದಿಗಾಗಿಯೇ ಉಪಯೋಗಿಸುತ್ತಾರೆ. ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿರುವ ಜನರಲ್ಲಿ ಯಾರು ತಮ್ಮ ಆದಾಯದ ಶೇಕಡಾ ೩೩ ಕಡಿಮೆ ಆಹಾರಕ್ಕಾಗಿ ಖರ್ಚು ಮಾಡುತ್ತಾರೋ ಅಂಥವರನ್ನು ಬಡವರೆಂದು ಪರಿಗಣಿಸಲಾಗುತ್ತದೆ ಮತ್ತು ಅವರಿಗೆ ಸಹಾಯಧನವನ್ನು ಕೊಡಲಾಗುತ್ತದೆ. ಈ ಅಳತೆಗೋಲಿನ ಪ್ರಕಾರ ಭಾರತದಲ್ಲಿರುವವರಲ್ಲಿ ಶೇಕಡಾ ೬೦ ರಷ್ಟು ಜನರು "ಬಡವರು" ಎಂದೆನಿಸಿ ಕೊಳ್ಳುತ್ತಾರೆ. ಮೂರವರೆ ಕೋಟಿ ಮಕ್ಕಳು ೬ ರಿಂದ ೧೦ ವರ್ಷದೊಳಗಿನವರು - ಶಾಲಾ ಶಿಕ್ಷಣದಿಂದ ವಂಚಿತರಾಗಿರುತ್ತಾರೆ. ಬಹು ದೊಡ್ಡ ಸಂಖ್ಯೆಯ ಬಡ ಮಕ್ಕಳು ೨ ರಿಂದ ೩ ವರ್ಷದೊಳಗಾಗಿ ಶಾಲೆಯಿಂದ ಹೊರಬರುತ್ತವೆ.

ಈಗ ಬಡತನ ನಿರ್ಮೂಲನಕ್ಕೆ ಸೂಚಿಸಲಾಗುತ್ತಿರುವ ಉಪಾಯವೇನೆಂದರೆ ಚಿಕ್ಕ ಚಿಕ್ಕ ಸಮೂಹಗಳಲ್ಲಿ ಸ್ವ-ಸಹಾಯ ಗುಂಪುಗಳನ್ನು ರಚಿಸಿಕೊಳ್ಳಬೇಕು ಮತ್ತು ಅವುಗಳಿಗೆ ಸಣ್ಣ ಪ್ರಮಾಣದ ಸಾಲದ ಬೆಂಬಲ ಇರಬೇಕೆಂಬುದೇ ಆಗಿದೆ. ಇದೇ ರೀತಿಯ ಮಾರ್ಗವು ಮಹಾತ್ಮಾ ಗಾಂಧೀಜಿಯವರಿಂದಲೂ ಶಿಫಾರಸು ಮಾಡಲ್ಪಟ್ಟಿತ್ತು. ಸ್ವತಂತ್ರ ಭಾರತದ ಅತ್ಯಂತ ಮಹತ್ವದ ಕರ್ತವ್ಯ ಪ್ರತಿಯೊಬ್ಬ ಮಹಿಳೆ ಮತ್ತು ಪುರುಷ ತಮ್ಮ ತಮ್ಮ ದೈನಂದಿನ ಜೀವಿತವನ್ನು ಜನಸಾಮಾನ್ಯರ ಉತ್ಪಾದನಾ ತಂತ್ರಜ್ಞಾನದಿಂದ ನಡೆಸಬೇಕೆಂದು ಗಾಂಧೀಜಿ ಬೋಧಿ

ಸಿದ್ದರು. ಆದರೆ ವಿಶ್ವ ವಾಣಿಜ್ಯ ಒಪ್ಪಂದವು ಇವಕ್ಕೆ ವಿರುದ್ಧವಾಗಿದೆ. ಅದು ಸ್ಪರ್ಧಾತ್ಮಕ ದಕ್ಷತೆ ಮತ್ತು ಮುಕ್ತ ವ್ಯಾಪಾರವನ್ನು ಅವಲಂಬಿಸಿದೆ. ಯಾವಾಗ ಯಾಂತ್ರಿಕವಾದ ಬೃಹತ್ ಉತ್ಪಾದನೆಯು ಜನಸಮೂಹದ ಉತ್ಪಾದನೆಯ ಜೊತೆ ಸ್ಪರ್ಧೆಗೆ ಇಳಿಯುತ್ತದೋ ಆಗ ಮುಕ್ತ ವ್ಯಾಪಾರವೆಂಬುದು ನಿಲುಗಡೆಗೆ ಬರುತ್ತದೆ. ಈ ಕ್ಷೇತ್ರವಲ್ಲಿ ಸಮಾನ ಅವಕಾಶಗಳಿರುವುದಿಲ್ಲ. ಏಕೆಂದರೆ ಒಂದು ಕಡೆಗೆ ಹೆಚ್ಚುವರಿ ಆದಾಯ ಮತ್ತು ಹಣದ ಅಳತೆಗೋಲಿದ್ದರೆ, ಇನ್ನೊಂದು ಕಡೆಗೆ ಬದುಕಿನ ಅರ್ಥಶಾಸ್ತ್ರ, ಭದ್ರತೆ ಮತ್ತು ಮಾನವನ ಮೂಲಭೂತ ಆವಶ್ಯಕತೆಗಳಿರುತ್ತವೆ. ಕೈಗಾರಿಕೆಯ ದಕ್ಷತೆಯನ್ನು ಅದರ ಗರಿಷ್ಠ ಉತ್ಪಾದನೆ ಮತ್ತು ಕನಿಷ್ಠ ಕೆಲಸಗಾರರ ಉಪಯೋಗದ ಮೇಲೆ ಅಳೆಯಲಾಗುತ್ತದೆ. ಇದನ್ನೇ "ಉದ್ಯೋಗರಹಿತ ಬೆಳವಣಿಗೆ" ಎಂದು ಕರೆಯಲಾಗುತ್ತಿದೆ. ಉದ್ಯೋಗ ರಹಿತ ಬೆಳವಣಿಗೆ ಸಂತೋಷವಿಲ್ಲದ ಬೆಳವಣಿಗೆಯೇ ಆಗಿರುತ್ತದೆ. ಭಾರತ ಮತ್ತು ಜನಬಾಹುಳ್ಯವುಳ್ಳ ದೇಶಗಳಲ್ಲಿ ಮತ್ತು ಅಪಾರ ಯುವಶಕ್ತಿಯುಳ್ಳ ಅಭಿವೃದ್ಧಿಶೀಲ ದೇಶಗಳಲ್ಲಿ ಬೇಕಾಗಿರುವುದು ಉದ್ಯೋಗ ಸೃಷ್ಟಿಸುವ ಆರ್ಥಿಕ ಬೆಳವಣಿಗೆ ಮತ್ತು ಇಂಥ ಬೆಳವಣಿಗೆಯು ಪರಿಸರ ಸಂರಕ್ಷಣೆ, ಆರ್ಥಿಕ ದಕ್ಷತೆ ಮತ್ತು ಸ್ತ್ರೀ–ಪುರುಷ ಸಮಾನತೆಯ ತತ್ವದಲ್ಲಿ ಆಧಾರಿತಗೊಂಡಿರಬೇಕು. ಆದ್ದರಿಂದ ನಮಗೆ ಮಾನವಕುಲ ಹಿತವನ್ನು ಗಮನಿಸುವಂಥ ತತ್ರಜ್ಞಾನ ಹಾಗೂ ಅರ್ಥಶಾಸ್ತ್ರವು ಬೇಕೇ ಹೊರತು ಸಾಮಾಜಿಕ ಹಿತ ಮತ್ತು ಪರಿಸರ ನಾಶ ಮಾಡುವಂಥ ಕೇವಲ ಆರ್ಥಿಕ ಉತ್ಪಾದನೆಯಲ್ಲ. ಚಿಕ್ಕ–ಚಿಕ್ಕ ಸಾಲಗಳ ಸಹಾಯದಿಂದ ಉತ್ಪಾದಿತವಾದ ಪದಾರ್ಥಗಳ ಪರಿಣಾಮವು ಕೃಷಿ ಮತ್ತು ಕೃಷಿಯೇತರ ಉದ್ಯೋಗವಕಾಶಗಳ ಮೇಲೆ ಯಾವ ರೀತಿ ಆಗುತ್ತದೆ ಎಂಬುದನ್ನು ಗಮನವಿರಿಸಿಕೊಂಡು ಸಕಾರಾತ್ಮಕ ವಿಶ್ಲೇಷಣೆ ಮಾಡದಿದ್ದರೆ ಈ ಹೊಸ ವಾಣಿಜ್ಯ ನೀತಿಯಿಂದಾಗಿ ನಾವು ಜಡತನವನ್ನೇ ಆಮದು ಮಾಡಿಕೊಳ್ಳುತ್ತೇವೆಂಬ ನನ್ನ ಭಯಕ್ಕೆ ಕಾರಣಗೊತ್ತಾಗುತ್ತದೆ.

ದಕ್ಷತೆ, ಅರ್ಥಶಾಸ್ತ್ರ ಮತ್ತು ಪರಿಸರಶಾಸ್ತ್ರ ಇವುಗಳೇ ವಿಶ್ವ ವಾಣಿಜ್ಯದ ಆಧಾರ ಸ್ತಂಭಗಳಾಗಲಿವೆ. ಜನಸಮುದಾಯದ ಅಂಕಿ ಸಂಖ್ಯೆಗಳ ಚಿತ್ರವನ್ನು ಗಮನದಲ್ಲಿರಿಸಿಕೊಂಡಾಗ ಜನಸಂಖ್ಯೆಯ ಶೇಕಡಾ ೫೦ ರಷ್ಟು ಜನರು ೨೧ ವರ್ಷದ ಕೆಳಗಿನವರಿದ್ದಾರೆ ಎಂದು ಗೊತ್ತಾಗುತ್ತದೆ. ಆದ್ದರಿಂದ ಉದ್ಯೋಗವನ್ನು ತೀವ್ರವಾಗಿ ಸೃಷ್ಟಿಸುವ ಸಣ್ಣಪ್ರಮಾಣದ ಕೃಷಿ ಮತ್ತು ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದನ್ನು ಬಿಟ್ಟರೆ ಬೇರೆ ಯಾವ ಮಾರ್ಗವೇ ಇಲ್ಲ. ನಮ್ಮ ವ್ಯವಸಾಯದ ಹಿಡುವಳಿಗಳಲ್ಲಿ ಶೇಕಡಾ ೬೦ರಷ್ಟು ಹಿಡುವಳಿಗಳಲ್ಲಿ ಚಿಕ್ಕ ಮತ್ತು

ಅತಿ ಚಿಕ್ಕ ವ್ಯವಸಾಯಿ ಕುಟುಂಬಗಳೇ ಕೃಷಿ ಮಾಡುತ್ತಿವೆ. ಈಗ ನಮ್ಮ ಮುಂದೆ ಇರುವ ಪ್ರಶ್ನೆ ಈ ಚಿಕ್ಕ ಉತ್ಪಾದಕರನ್ನೂ ಆರ್ಥಿಕವಾಗಿ ಸಮರ್ಥರನ್ನಾಗಿ ಮತ್ತು ದಕ್ಷರನ್ನಾಗಿ ಮಾಡುವುದರ ಮೂಲಕ ಅವರು ಶಕ್ತಿಶಾಲಿ ಆಗುವಂತೆ ಹೇಗೆ ಮಾಡುವುದು ಎಂಬುದೇ ಆಗಿದೆ. ಸ್ಪರ್ಧೆ ಹೊಸತನ್ನು ಸೃಷ್ಟಿಸುತ್ತದೆ. ವಾಣಿಜ್ಯದಲ್ಲಿಯ ಯಶಸ್ಸು ಬಂಡವಾಳ ಹೂಡಿಕೆಯನ್ನು ಮತ್ತು ಸ್ವಜನರಿಗೆ ಸಹಾಯವನ್ನೂ ಉಂಟುಮಾಡುತ್ತದೆ. ಚಿಕ್ಕ ಸಾಹಸೋದ್ಯಮಗಳು ಸ್ಪರ್ಧಾತ್ಮಕವಾಗಬೇಕಾದರೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು:-

ಮೊದಲನೆಯದು, ಗ್ರಾಮಾಂತರ ಪ್ರದೇಶದ ಮೂಲಭೂತ ಸೌಕರ್ಯಕ್ಕಾಗಿ ಇನ್ನೂ ಹೆಚ್ಚಿನ ಬಂಡವಾಳ ಹೂಡಿಕೆ ಅಗತ್ಯವಾಗಿದೆ. ಎರಡನೇಯದು, ಗುತ್ತಿಗೆ ಆಧಾರಿತ ವ್ಯವಸಾಯ ಮತ್ತು ಉತ್ಪಾದಿಸಿದ್ದನ್ನು ಹಿಂದಕ್ಕೆ ಖರೀದಿಸುವ ವ್ಯವಸ್ಥೆಯನ್ನು ಬೆಳೆಸಬೇಕು. ಇದರಿಂದಾಗಿ ದೊಡ್ಡ ಕೈಗಾರಿಕೆಗಳವರು ಚಿಕ್ಕ ಕೃಷಿ ಕುಟುಂಬಗಳಿಗೆ ಭರವಸೆ ಮತ್ತು ಲಾಭಕರ ಮಾರುಕಟ್ಟೆಯನ್ನು ದೊರಕುವ ಅವಕಾಶಗಳನ್ನು ಕಲ್ಪಿಸಿಕೊಟ್ಟಂತಾಗುವುದು, ಮೂರನೇಯದು, ಔದ್ಯೋಗಿಕರಣಗೊಂಡಿರುವ ದೇಶಗಳು ಪ್ರತ್ಯಕ್ಷ ಮತ್ತು ಪರೋಕ್ಷ ರಿಯಾಯಿತಿಗಳನ್ನು ಕಡಿಮೆ ಮಾಡಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿಯ ಕೃಷಿ ಉತ್ಪನ್ನಗಳಿಗೆ ತಮ್ಮ ಮಾರುಕಟ್ಟೆಗಳನ್ನು ಮುಕ್ತಗೊಳಿಸಬೇಕು. ಕೊನೆಯದಾಗಿ, ವಿಶ್ವ ವಾಣಿಜ್ಯ ಒಪ್ಪಂದವು "ವಾಣಿಜ್ಯ ಸಂಬಂಧಿತ ಬೌದ್ಧಿಕ ಆಸ್ತಿ ಹಕ್ಕುಗಳು" (TRIPS) ಮಾರ್ಪಡಿಸಬೇಕು. ಈ ಮಾರ್ಪಾಟಿನ ಕಾರಣದಿಂದ ಸಮಾನತೆಯ ತತ್ವಗಳು, ಮುಖ್ಯವಾಗಿ, "ಜೀವ ವೈವಿಧ್ಯ ಕುರಿತಾಗಿರುವ ಒಪ್ಪಂದ" ದಲ್ಲಿ ಜಾರಿಗೆ ಬರಲು ಸಾಧ್ಯವಾಗುತ್ತದೆ. ಆಗ ಪರಂಪರಾಗತವಾದ ಜ್ಞಾನವನ್ನು ಹೊಂದಿರುವ ಮತ್ತು ಕೆಳಸ್ತರದಲ್ಲ ಪ್ರಕೃತಿಯ ರಕ್ಷಕರಾಗಿರುವವರು ಬಡವರಾಗಿಯೇ ಉಳಿಯುವುದು ಮತ್ತು ಅದೆಲ್ಲ ಜ್ಞಾನ ಮತ್ತು ಸಾಧನಗಳನ್ನು ಬಳಸಿಕೊಂಡವರು ಶ್ರೀಮಂತರಾಗುವುದು ತಪ್ಪುತ್ತದೆ.

ಮುಕ್ತ ವಾಣಿಜ್ಯದಿಂದ ನಿರುದ್ಯೋಗ ಮತ್ತು ಬಡತನಗಳ ಆಮದು ಆಗದಂತೆ ಎಚ್ಚರಿಕೆ ವಹಿಸಬೇಕು. ವಿಶ್ವ ವಾಣಿಜ್ಯವು ನಿಜವಾದ ಅರ್ಥದಲ್ಲಿ ಬಡತನ ನಿರ್ಮೂಲನದ ಸಾಧನವಾಗಬೇಕಿದ್ದರೆ ಆಮದು ನೀತಿಗಳಿಂದ ಬಡವರ ಜೀವನದ ಭದ್ರತೆಯ ಮೇಲೆ ಆಗುವ ಪರಿಣಾಮ ಕುರಿತು ವಿಶ್ಲೇಷಣೆ ಮಾಡಬೇಕಾದುದು ಅಗತ್ಯ.

ಈಗಾಗಲೇ ಹೇಳಿರುವಂತೆ ವಿಶ್ವ ವಾಣಿಜ್ಯದ ಪ್ರಧಾನ ಆಹ್ವಾನ ವ್ಯವಸಾಯದ ಉತ್ಪನ್ನಗಳಿಗೆ ಸಂಬಂಧಿಸಿದುದಾಗಿದೆ. ಯಾಂತ್ರಿಕವಾಗಿ ಮತ್ತು ವ್ಯಾಪಕ

ವಾಗಿ ನಶಿಸುವ ವ್ಯವಸಾಯದ ಉತ್ಪನ್ನಗಳ ಜೊತೆಗೆ ಲಕ್ಷಾಂತರ ಚಿಕ್ಕ ಹಿಡುವಳಿದಾರರು ಉತ್ಪಾದಿಸುವ ಪದಾರ್ಥಗಳಿಗೂ ಸಮಾನವಾದ ಅವಕಾಶಗಳಿರಬೇಕು. ಹೆಚ್ಚುತ್ತಿರುವ ಶ್ರೀಮಂತ ಮತ್ತು ಬಡವರ ಮಧ್ಯದ ಅಂತರವನ್ನು ತಪ್ಪಿಸಬೇಕಾದರೆ "ವಿಶ್ವ ಸಮಾನತಾ ವಾಣಿಜ್ಯ ಸಂಸ್ಥೆ"ಯನ್ನು ಸ್ಥಾಪಿಸಬೇಕು. ಇದು ವಿಶ್ವ ಪರಿಸರ ಸಂಘಟನೆಯ ರೀತಿಯಲ್ಲಿ ಇರಬೇಕು. ಈ ಸಂಸ್ಥೆಯು ಮೂಲಭೂತ ಸೌಕರ್ಯಗಳನ್ನು ಬಲಪಡಿಸಲು, ಸುಗ್ಗಿ ಅನಂತರದ ತಂತ್ರಜ್ಞಾನವನ್ನು ಬಲಪಡಿಸಲು ಮತ್ತು ನೈರ್ಮಲ್ಯದ ವ್ಯವಸ್ಥೆಯನ್ನು ಬಲಪಡಿಸಲು ಆರ್ಥಿಕ ನೆರವನ್ನು ನೀಡಬೇಕು ಚಿಕ್ಕ ಪ್ರಮಾಣದ ವಿಕೇಂದ್ರೀಕೃತ ರೀತಿಯ ಉತ್ಪಾದನೆಯೊಂದೇ ಬಡತನ ನಿರ್ಮೂಲನದ ಮಾರ್ಗವಾಗಬೇಕು. ಈಗ ಭಾರತ ಮತ್ತು ಬೇರೆ ಇತರೆ ಅಭಿವೃದ್ಧಿ ದೇಶಗಳಲ್ಲಿ ಜನಸಾಮಾನ್ಯರ ಹಂತದಲ್ಲಿಯೇ ಉದ್ಯೋಗದ ಅವಕಾಶಗಳು ಹೆಚ್ಚಾಗಿವೆ. ಆದ್ದರಿಂದ ಅಂಥ ದೇಶಗಳಲ್ಲಿ ಮುಂದಿನ ೨೦ ವರ್ಷಗಳ ಅವಧಿಯ ಮಟ್ಟಿಗಾದರೂ ಜನಸಾಮಾನ್ಯರಿಂದ ಆಗುವ ಉತ್ಪಾದನಾ ರೀತಿಯೊಂದೇ ಉದ್ಯೋಗಾಧಾರಿತ ಬೆಳವಣಿಗೆಗೆ ಸಹಕಾರಿಯಾಗಬಲ್ಲದು.

ಸಂಕ್ಷಿಪ್ತವಾಗಿ ಹೇಳುವುದಾದರೆ, ವಿಶ್ವ ವಾಣಿಜ್ಯ ಒಪ್ಪಂದವು ಬಡವರೂ ಮತ್ತು ಸಾಮಾಜಿಕವಾಗಿ ಹಿಂದುಳಿದವರೂ ಆದವರಲ್ಲಿ ಆಹಾರ ಮತ್ತು ಪರಿಸರಾತ್ಮಕ ಭದ್ರತೆ, ಜೀವ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಇವು ಪ್ರಚಾರವಾಗುವುದಕ್ಕೆ ಈ ಕೆಳಗೆ ಕಾಣಿಸಿದ ಕ್ರಮಗಳನ್ನು ಕೈಗೊಳ್ಳಬೇಕು:–

೧. ಮಾರುಕಟ್ಟೆಯಲ್ಲಿ ಆಹಾರಧಾನ್ಯ ಲಭ್ಯ ಇದೆ ಎಂಬುದಕ್ಕಿಂತ ಹೆಚ್ಚಾಗಿ ಆ ಧಾನ್ಯವನ್ನು ಖರೀದಿಸುವ ಆರ್ಥಿಕ ಬಲವನ್ನು ಜನರಿಗೆ ತಂದುಕೊಡಬೇಕಾದುದು ಮುಖ್ಯವಾಗಿದೆ. ೮೦ ಕೋಟಿಗೂ ಹೆಚ್ಚು ಜನ ಸದಾ ಕಾಲ ಹಸಿವೆಯಿಂದ ಬಳಲುವುದಕ್ಕೆ ಮುಖ್ಯ ಕಾರಣ ಉದ್ಯೋಗಗಳ ಅಭಾವ. ಆದ್ದರಿಂದ ವಿಶ್ವ ವಾಣಿಜ್ಯದ ಒಪ್ಪಂದದ ಕಾರಣದಿಂದಾಗಿ ಉದ್ಯೋಗಗಳು ಹೆಚ್ಚಾಗುವಂತೆ ನೋಡಿಕೊಳ್ಳಬೇಕಾದುದು ಬಹಳ ಅಗತ್ಯವಾಗಿದೆ. ಅನಿರ್ಬಂಧ ಆಮದುಗಳಿಂದ ಸ್ಥಳೀಯ ಜನರ ಜೀವನದ ಉದ್ಯೋಗಗಳಿಗೆ ಧಕ್ಕೆ ಒದಗುವುದಾದರೆ ಅವುಗಳ ಮೇಲೆ ನಿರ್ಬಂಧ ಹಾಕುವ ಹಕ್ಕು ಆ ದೇಶಕ್ಕೆ ಇರಬೇಕು.

೨. ಕೇಂದ್ರೀಕೃತ ಬೃಹತ್ ಉತ್ಪಾದನಾ ತಂತ್ರಜ್ಞಾನ ಮತ್ತು ಜನಸಾಮಾನ್ಯರ ಉತ್ಪಾದನೆಯ ವಿಕೇಂದ್ರೀಕೃತ ತಂತ್ರಜ್ಞಾನ ಇವುಗಳ ಮಧ್ಯ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡಲು ರಸ್ತೆ, ಉಗ್ರಾಣ, ಮಾರುಕಟ್ಟೆ, ನೈರ್ಮಲ್ಯದ ವ್ಯವಸ್ಥೆ ಇತ್ಯಾದಿ ಮೂಲಭೂತ ಸೌಕರ್ಯಗಳಿಗಾಗಿ ಬಹು ದೊಡ್ಡ ಪ್ರಮಾಣದಲ್ಲಿ ಬಂಡ

ವಾಳವನ್ನು ಹೂಡಬೇಕು.

ಒಟ್ಟಿನಲ್ಲಿ ಮುಕ್ತ ವಾಣಿಜ್ಯದ ಪರಿಣಾಮ ಭಾರತದ ವ್ಯವಸಾಯವನ್ನು ಅಭಿವೃದ್ಧಿಗೊಳಿಸುತ್ತದೆಯೋ ಅಥವಾ ಬಡತನವನ್ನು ಹೆಚ್ಚಿಸುತ್ತದೆಯೋ ಎಂಬುದನ್ನು ಅವಲಂಬಿಸಿದೆ. ವ್ಯವಸಾಯವೇ ಭಾರತದಲ್ಲಿ ಪ್ರಧಾನವಾದ ಜೀವನ ವಿಧಾನವಾಗಿದೆ. ಬಡತನದಲ್ಲಿರುವ ಕಷ್ಟ ಜೀವಿಗಳನ್ನು ವಿಶ್ವ ವಾಣಿಜ್ಯದ ಆಹ್ವಾನಗಳಿಗೆ ಅವರಿಗೆ ಸೂಕ್ತ ನೆರವನ್ನು ಕೊಡದೇ ಒಡ್ಡುವುದು ನಿರುದ್ಯೋಗವನ್ನೂ ಮತ್ತು ಶ್ರೀಮಂತ ಬಡವರ ಅಂತರವನ್ನೂ ಹೆಚ್ಚಿಸದೇ ಆಗಿದೆ. ★

(ಮೂಲ: ಹಿಂದೂ; ಅನು: ಸಂ. ಕೌ)

ಸ್ವದೇಶಿ ಆಂದೋಲನ ೨೬ ನೇ ಪುಟದಿಂದ

ಬಲ್ಲರು? ಇದೇ ರೀತಿ ಕಬ್ಬಿಣ ಮತ್ತು ಉಕ್ಕನ್ನು ತಯಾರಿಸುವ ತಾಂತ್ರಿಕತೆಯ ಬಗ್ಗೆ ಕೂಡ.

ಎರವಲವಾಗಿ ತಂದ ತಂತ್ರಜ್ಞಾನ ಮತ್ತು ಸಿದ್ಧಾಂತಕ್ಕೆ ತನ್ನದೇ ಆದ ಸ್ವಾಯತ್ತತೆ ಇರುತ್ತದೆ. ನಮ್ಮ ಅಗತ್ಯಕ್ಕೆ ತಕ್ಕ ಪದಾರ್ಥಗಳೊಂದಿಗೆ ನಾವು ಸಂಬಂಧ ಇಟ್ಟುಕೊಳ್ಳಬೇಕಾಗಿತ್ತು. ರಾಷ್ಟ್ರೀಯ ಯೋಜನಾ ಉಪಸಮಿತಿಯ ವರ್ಧಾ ಸಭೆಯಲ್ಲಿ ಗಾಂಧೀಜಿಯವರು ಮೊದಲು ಉತ್ಪಾದನೆಯ ಗುರಿಯನ್ನು ನಿಶ್ಚಯಿಸಲು ಹೇಳಿದರು. ನಂತರ ಅದರಲ್ಲಿ ಎಷ್ಟು ಪ್ರಮಾಣ ದೇಶಿ ಪದ್ಧತಿಯಲ್ಲಿ ಮತ್ತು ಎಷ್ಟು ಪ್ರಮಾಣ ಔದ್ಯೋಗಿಕ ರೀತಿಯಲ್ಲಿ ಎಂಬುದನ್ನು ಪರಸ್ಪರ ಮಾತುಕತೆಯಿಂದ ತೀರ್ಮಾನಿಸಲು ತಿಳಿಸಿದ್ದರು. ಸಂಪನ್ಮೂಲಗಳನ್ನು ಹೊರಗಿನಿಂದ ತರುವುದಿಲ್ಲವೆಂಬುದು ಮಾತ್ರ ಪೂರ್ವ ನಿಶ್ಚಿತವಾಗಿರಬೇಕು. ಎರಡೂ ಕ್ಷೇತ್ರಗಳಲ್ಲಿ ಆಂತರಿಕ ಸಂಪನ್ಮೂಲಗಳನ್ನೇ ಉಪಯೋಗಿಸಿಕೊಂಡು ಮತ್ತು ಇದನೇ ವ್ಯವಹಾರದ ಅಳತೆಗೋಲನ್ನಾಗಿ ಇಟ್ಟುಕೊಂಡರೆ ಯಾವ ಸಮಸ್ಯೆಯೂ ಇರುವುದಿಲ್ಲ. ನಮ್ಮ ನಿಯಂತ್ರಣ ಇಲ್ಲವಾದರೆ ಸ್ವಾಯತ್ತತೆಯೆಂಬುದೇ ಇರುವುದಿಲ್ಲ, ಸ್ವಾವಲಂಬನೆಯೂ ಇರುವುದಿಲ್ಲ. ★

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

KA-SKMND-470/-2000

ತೆರೆದ_ಅಂಚೆ

Vol 1 Issue 10.

Janapada Vichara – Kannada, Monthly Digest Edited and Printed by Surendra Koulagi at Janapada Seva Trust Printing Press, Melkote on behalf of Janapada Seva Trust, (Regd) Melkote, Dist – Mandya 571 431.

Phone : 08236/58754